## ಶ್ರೀ ವಿಕೃತಿನಾಮ ಸಂವತ್ಸರ, ಅಧಿಕ ವೈಶಾಖಮಾಸ

**ಏಪ್ರಿಲ್ 2010**

**24. ದಶಮಿ ಅನುಷ್ಠಾನ ಹರಿವಾಸರ ರಾತ್ರಿ 8-18.**

**25. ಸರ್ವೇಷಾಮೇಕಾದಶಿ (ಕಾಮದಾ)**

**26.** ಪಾರಣ. 27. ಪ್ರದೋಷ.

**ಮೇ 2010**

**05.** ಕಾಲಾಷ್ಟಮೀ. **08.** ಆರ್ಯ ದಶಮಿ 55-58 15-5

**09. ದಶಮಿ ಅನುಷ್ಠಾನ ಹರಿವಾಸರ ರಾತ್ರಿ 9-20 ರಿಂದ**

**10. ಸರ್ವೇಷಾಮೇಕಾದಶಿ (ವರೂಥಿನಿ)**

**11.** ಪ್ರದೋಷ, ಪಾರಣ.

**14.** ವಿಷ್ಣುಪಂಚಕೋಪವಾಸ, ಅಧಿಕದ ಅಮಾವಾಸ್ಯೆ.

### ಮೇ 2010ರ ಸಂಚಿಕೆಯಲ್ಲಿ

**ಆಚಾರ-ವಿಚಾರದ ಬಗ್ಗೆ** ಹರಿದಾಸರು ತೋರಿದ ಕಳಕಳಿ ಮತ್ತು ಅವರ ಕೃತಿಗಳಲ್ಲಿ ವ್ಯಕ್ತಪಡಿಸಿರುವ ರೀತಿ, ಇವುಗಳ ಬಗ್ಗೆ ಮೇ 2010ರ **ರಂಗವಿಠಲ**ದಲ್ಲಿ ವಿಮರ್ಶೆ ಪ್ರಕಟಿಸುವ ಅಭಿಪ್ರಾಯವಿದೆ. ಲೇಖಕರು ದಯಮಾಡಿ ತಮ್ಮ ಲೇಖನಗಳನ್ನು ಏಪ್ರಿಲ್ 25 ರೊಳಗೆ ಕಳುಹಿಸಲು ಕೋರುತ್ತೇವೆ.

**ನಿನ್ನ ಪೂಜೆಯೋ-ರಾಮು, ನಿನ್ನ ಪೂಜೆ ಹೊರತಿಲ್ಲ ಎನ್ನ ವ್ಯಾಪಾರವೆಲ್ಲ ಸ್ನಾನ ಸಂಧ್ಯಾವಂದನ ಹೋಮ ಮೌನ ಜಪ ಸದ್ಗ್ರಂಥ ವ್ಯಾಖ್ಯಾನ ಯಜ್ಞಸಾಧನ ಸಂಪಾದನ ಅಧ್ಯಯನ ನಾನಾ ರಸ ನೈವೇದ್ಯ ಭೋಜನ ತಾಂಬೂಲಚರ್ವಣ ಮಾನಿನಿ ಮೊದಲಾದ ಸ್ಯಂದನ ಗಾನದ ಭೋಗಗಳೆಲ್ಲ। ಸರ್ವೇಂದ್ರಿಯಗಳಲಿಹ ಶರ್ವಾದಿ ದೇವರ್ಕಳಿಗೆ ಸರ್ವಚೇಷ್ಟಾಪ್ರದನಾದ ಪ್ರಾಣಗೆ ನಿರ್ವಾಹಕನಾಗಿ ಸರ್ವ ಜೀವರ ಕೈಯಿಂದ ಸರ್ವಜ್ಞಾನ ಕರ್ಮಗಳನು ಸರ್ವದಾ ಮಾಡಿಸಿ ಅವರ ಸರ್ವಶುಭಭೋಕ್ತನಹೆ । ಅಂಗಾಂಗಗಳಲ್ಲಿ ಸುರರು ಕಂಗಳಲ್ಲಿ ಭಾಗ್ಯಲಕ್ಷ್ಮಿ ಉಂಗುಷ್ಠದಿ ಲೋಕಪಾವನೆ ಗಂಗಾದೇವಿಯು ಹಿಂಗದೆ ನಿನ್ನಲ್ಲಿರಲು ತುಂಗಗುಣ ಪರಿಪೂರ್ಣ ರಂಗವಿಠಲ ನೆಲೆಯಾಗಿ ಮಂಗಳಾಂಗನೆ ಮನ್ನಿಸುವೆಯೊ॥**

ಎಂಬ ಶ್ರೀಪಾದರಾಜ ಕೃತಿಯ ಬಗ್ಗೆ ವಿಮರ್ಶಾತ್ಮಕ ಲೇಖನವನ್ನು **ಜೂನ್ 2010 ರಂಗವಿಠಲ** ಪ್ರಕಟಪಡಿಸುವ ಅಭಿಪ್ರಾಯವಿದೆ. ಈ ಕೃತಿಯಂತೆ ಹೋಲುವ ಇತರ ಹರಿದಾಸರುಗಳ ಕೃತಿಗಳ ವಿಮರ್ಶೆಯನ್ನು ನೀಡಬಹುದು. ಮೇ 25ರ ಒಳಗೆ ನಿಮ್ಮ ಲೇಖನಗಳು ಕಳುಹಿಸಲು ಕೋರಿದೆ.

**ಸಂಪಾದಕ, ರಂಗವಿಠಲ.**



# ರಂಗವಿಠಲ

ಶ್ರೀ ಶ್ರೀಪಾದರಾಜರ ಭಕ್ತಿಸಾಹಿತ್ಯ, ದಾಸಸಾಹಿತ್ಯ, ದೇವರನಾಮ, ಧರ್ಮಚಿಂತನೆ ಮತ್ತು ಜ್ಞಾನಸತ್ರಕ್ಕೆ ಮೀಸಲಾದ ಮಾಸಪತ್ರಿಕೆ

**ವಿಕೃತಿ, ಚೈತ್ರ**

**ಏಪ್ರಿಲ್, 2010**

**April-2010**

(ಜಿಲ್ಲಾದಂಡಾಧಿಕಾರಿಗಳ ಮತ್ತು RNI ಅಧಿಕೃತ ಅನುಮೋದನೆ ನಂತರ ಇದು

**Volume 6, Issue 8 : ಸಂಪುಟ 6 ಸಂಚಿಕೆ 8**

ಪತ್ರಿಕೆಯು ಪ್ರತಿ ತಿಂಗಳು 15 ರಂದು ಪ್ರಕಟವಾಗುತ್ತದೆ)

Editor :
**H.B. Lakshminarayana**
No. 58, Raghavendra Colony, Chamarajpet,
Bangalore-560 018 Phone : (080) 26914637, 26914571

Publisher :
**Sri Sripadaraja Mutt**
Mulbagal, Kolar
Phone: 08159-290839

Printer :
**Sri Sripadaraja Printers & Publisher**
No. 58, Raghavendra Colony, Chamarajpet,
Bangalore-560 018. Phone : (080) 26914637

**Address: Postal / Courier / Email**

**Sri Sripadaraja Mutt**
No. 58, Raghavendra Colony, Chamarajpet,
Bangalore-560 018. Phone : (080) 26914637, 26914571
Website: www.Sripadarajamutt.org
Email: rangavittala.sripada@gmail.com

## ಸಂಪಾದಕೀಯ

### ಅಧಿಕಮಾಸ ಕುರಿತ ವಿಶೇಷ ಅಧ್ಯಯನ

ಏಪ್ರಿಲ್ 2010 **ರಂಗವಿಠಲ** ಸಂಚಿಕೆಯನ್ನು **ಪರಂಪರಾನುಗತ ಆಚರಿಸಲಾಗುತ್ತಿರುವ ಅಧಿಕಮಾಸ ವ್ರತಾಚರಣೆಗೆ ಮೀಸಲಿಟ್ಟಿದ್ದೇವೆ.** ಆಸ್ತಿಕರಲ್ಲಿ ಸಂಪ್ರದಾಯಸ್ಥರು, ಸಾಮಾನ್ಯಜನರು, ಗೃಹಸ್ಥರು, ಸಹೃದಯಿಗಳು, ದಾರ್ಶನಿಕರು, ಸುಧಾರಕರು -ಹೀಗೆ ಭಕ್ತಸಮುದಾಯ ಜ್ಞಾನ, ಕರ್ಮ ಮತ್ತು ಭಕ್ತಿಯ ಸಮಾಗಮವಾದ ಈ ವ್ರತವನ್ನು ಶ್ರದ್ಧೆ - ತನ್ಮಯತೆಯಿಂದ ಆಚರಿಸಿಕೊಂಡು ಬಂದಿದ್ದಾರೆ.

ನಿತ್ಯಜೀವನಕ್ಕೆ ಪುರುಷಾರ್ಥ, ಸಮಾಧಾನ, ಸಂತೃಪ್ತಿ, ಆನಂದ, ಸೌಭಾಗ್ಯ ಮತ್ತು ಉಲ್ಲಾಸತರುವ **ಪುರುಷೋತ್ತಮಮಾಸದ ಬಗೆಗೆ ರಂಗವಿಠಲ ಪತ್ರಿಕೆಯ ಓದುಗರಲ್ಲಿ ಮನಃಪೂರ್ವಕ ನಂಬಿಕೆ ಹುಟ್ಟಿಸುವುದು ಪ್ರಸ್ತುತ ಅಧ್ಯಯನದ ಮೂಲಉದ್ದೇಶ.**

**ಈ ಬಾರಿ ಲೇಖನಗಳಿಗೆ ಬದಲಾಗಿ ಚರ್ಚೆ ಮತ್ತು ಪ್ರಶ್ನೆ ಉತ್ತರಗಳ ಮೂಲಕ ಶ್ರೀಮದ್ಭಾಗವತ ವಿಷ್ಣ್ವೀತನಿಷ್ಠವಾದ ಪುರುಷೋತ್ತಮಮಾಸವನ್ನು ಕುರಿತು ವಿಚಾರ ಹಂಚಿಕೊಂಡಿದ್ದೇವೆ. ಧಾರ್ಮಿಕ ಪತ್ರಿಕೋದ್ಯಮದಲ್ಲಿ ಇದೊಂದು ಅಪೂರ್ವ ಹೆಜ್ಜೆ.**

ಇದನ್ನು **ಆಗುಮಾಡಿದ** ಲೇಖಕರಿಗೆ **ರಂಗವಿಠಲ** ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತದೆ.

**ಸಂಪಾದಕ, ರಂಗವಿಠಲ**



# ಮುದ್ರಾಧಾರಣ ಮಹತ್ವ



ಪಂಚಮುದ್ರೆಗಳು ಪರಮಾತ್ಮನ ಆಯುಧಗಳಾಗಿರುವುದರಿಂದ ಅವುಗಳನ್ನು ನಮ್ಮ ಶರೀರದಲ್ಲಿ ಧರಿಸಿದರೆ ಮನೋಸ್ಥೈರ್ಯವೂ, ಧೈರ್ಯವೂ ಮತ್ತು ಅಚಲವಾದ ವಿಶ್ವಾಸವು ದೊರೆಯುತ್ತದೆ. ದೇಹ ಶುಚಿತ್ವ ಮತ್ತು ಸಜ್ಜನಿಕೆಯು ತಾನಾಗಿ ಮೂಡುವದು.



ಪಂಚಮುದ್ರೆಗಳು ಯಾವುವೆಂದರೆ: ಚಕ್ರ, ಶಂಖ, ಗದಾ, ಪದ್ಮ ಹಾಗೂ ನಾರಾಯಣ.

**ಚಕ್ರ :** ಕೋಟಿಸೂರ್ಯನಿಗೆ ಸಮನಾದ ಬೆಳಕು, ಜ್ವಾಲೆ, ಕಾಂತಿವುಳ್ಳ ಅಜ್ಞಾನವೆಂಬ ಕತ್ತಲೆಯಿಂದ ಕುರುಡನಾದ ನನಗೆ, ವಿಷ್ಣು ಮಾರ್ಗ ತೋರು.



**ಶಂಖ :** ಪಾಂಚಜನ್ಯ ಶಂಖವು ಸ್ವಾಭಾವಿಕವಾದ ಧ್ವನಿಯಿಂದಲೇ ಪಾಪಗಳನ್ನು ನಾಶಮಾಡುತ್ತದೆ. ಸಂಸಾರ ತಾಪತ್ರಯದಲ್ಲಿ ಸಿಲುಕಿರುವ ನನ್ನನ್ನೂ ಉದ್ಧರಿಸು.

**ಗದಾ :** ಕೌಮೋದಕೀ ಎಂಬ ಗದೆಯನ್ನು ಹಿಡಿದ ಶ್ರೀಹರಿಯನ್ನು ನಮಿಸುತ್ತೇನೆ.



**ಪದ್ಮ :** ಪದ್ಮ ಹಸ್ತನಾದ ವಿಷ್ಣು ಸಂಸಾರ ಭಯದಿಂದ ಭೀತರಾದ ಯೋಗಿಗಳಿಗೆ ಅಭಯ ಹಸ್ತ ನೀಡುತ್ತಿರುವನು. ಅಂತಹ ಪರಮಾತ್ಮನು ನನ್ನನ್ನು ರಕ್ಷಿಸಲಿ.



**ನಾರಾಯಣ ಮುದ್ರ :** ಹೇ ನಾರಾಯಣ, ನಿನಗೆ ನಮಸ್ಕಾರ. ಚಂಡಾಲ, ಬ್ರಹ್ಮಘಾತಕ ಮತ್ತು ಇತರ ಘೋರ ಪಾಪಗಳನ್ನು ಮಾಡಿದವರೂ ಕೂಡ ನಿನ್ನ ನಾಮ ಧಾರಣೆಯಿಂದ ಮುಕ್ತಿಯನ್ನು ಪಡೆಯುತ್ತಾರೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ:

**ವಿಶ್ವಮ್ ಕ್ರಾಫ್ಟ್ಸ್**

**ಬೆಳ್ಳಿ ಮತ್ತು ತಾಮ್ರದ ಪಂಚಮುದ್ರೆ ತಯಾರಕರು**

ನಂ. 355, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, 7ನೇ ಬ್ಲಾಕ್, ಜಯನಗರ, ಬೆಂಗಳೂರು-82. ಎನ್.ವಿ. ಗೋಪಿನಾಥ್: 9448672814, ಎನ್.ಜಿ. ಕಾರ್ತಿಕ್: 9480522365, ಮುಖ್ಯಪ್ರಾಣ ಭಟ್: 9448988535, ದೂರವಾಣಿ : 26764366

# ಉಭಯ ಶ್ರೀಪಾದರ ದಿಗ್ವಿಜಯ

ಮಾರ್ಚ್ 2010 **ಶ್ರೀವಿಜಯನಿಧಿತೀರ್ಥರ** ಮಹಾಸಮಾರಾಧನೆಯನ್ನು ಅತೀ ವಿಜೃಂಭಣೆಯಿಂದ ನೆರವೇರಿಸಿ ಪೆನುಗೊಂಡೆಯ **ಉದ್ಧಂಡ ರಾಮಚಂದ್ರತೀರ್ಥ** ಪರಿಸರದ ಅಭಿವೃದ್ಧಿ ಕಾರ್ಯವನ್ನು ಆರಾಧನಾ ಸಮಯದಲ್ಲಿ ಪೂರ್ಣಗೊಳಿಸಲಾಯಿತು. ಮರುದಿನ ಅಲ್ಲಿಂದ ಈರೋಡಿನ ಪಳ್ಳಿಪಾಳ್ಯದಲ್ಲಿರುವ **ಶ್ರೀಸುಧೀನಿಧಿತೀರ್ಥರ** ಆರಾಧನೆಯನ್ನು ನೆರವೇರಿಸಿದರು. ತದನಂತರ ಧರ್ಮಪುರಿಯಲ್ಲಿನ ಶ್ರೀಮಠದ ಭಕ್ತಸಮೂಹಕ್ಕೆ ಅನುಗ್ರಹಿಸಲು ಎರಡು ದಿನಗಳ ಕಾಲ ಧರ್ಮಪುರಿಯಲ್ಲಿ ಶ್ರೀಗೋಪೀನಾಥನ ಪೂಜೆಯನ್ನು ಸಲ್ಲಿಸಿ ಅಲ್ಲಿನ ಶಿಷ್ಯ ಸಮೂಹಕ್ಕೆ ಸಂತೋಷಪಡಿಸಿದರು.

ಚೈತ್ರ ಶುದ್ಧ ಪ್ರತಿಪದ್ ದಿನದಂದು ಶ್ರೀಮಠದ ಮೂಲವಿಗ್ರಹಗಳಿಗೆ ಪಂಚಾಮೃತ ಅಭಿಷೇಕವನ್ನು ನೆರವೇರಿಸಿದರು. ಈ ಕಾರ್ಯಕ್ರಮವನ್ನು **ಪ್ರಾಯೋಗಿಕವಾಗಿ ಶ್ರೀಮಠದ ವೆಬ್‌ಸೈಟ್‌ನಲ್ಲಿ ನೇರದರ್ಶನ** ವ್ಯವಸ್ಥೆಯನ್ನು ಅನುವು ಮಾಡಿಕೊಡಲಾಯಿತು.

**ಶ್ರೀಪಾದರಾಜರಿಂದ ಪ್ರತಿಷ್ಠಿತವಾದ ಕಾಕೋಳಿನ ಶ್ರೀಬೃಂದಾವನ ವೇಣುಗೋಪಾಲ ಸ್ವಾಮಿಯ ರಥೋತ್ಸವದ ಅಂಗವಾಗಿ ಪ್ರತಿವರ್ಷದಂತೆ ಈ ವರ್ಷವು ಕಿರಿಯ ಶ್ರೀಗಳಾದ ಶ್ರೀ ಶ್ರೀಕೇಶವನಿಧಿತೀರ್ಥ ಶ್ರೀಪಾದಂಗಳವರು ಕಾಕೋಳು ಕ್ಷೇತ್ರದಲ್ಲಿ ಶ್ರೀಗೋಪೀನಾಥನ ಪೂಜೆಯನ್ನು ಸಲ್ಲಿಸಿ ರಥೋತ್ಸವದ ಉತ್ಸವಕ್ಕೆ ಚಾಲನೆ ನೀಡಿದರು.** ಅಲ್ಲದೇ ಮಾರುತಿ ಸೇವಾ ನಗರದ ಶ್ರೀರಾಘವೇಂದ್ರ ಸ್ವಾಮಿ ಮಠದ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡುವುದಕ್ಕಾಗಿ ಶ್ರೀರಾಘವೇಂದ್ರಸ್ವಾಮಿಗಳ ಬೃಂದಾವನ ಕಲಾಕರ್ಷಣ ಸಮಾರಂಭವನ್ನು ನೆರವೇರಿಸಿಕೊಟ್ಟರು.

ಶ್ರೀಸುಶಮೀಂದ್ರತೀರ್ಥರ ಪ್ರಥಮ ಮಹಾಸಮಾರಾಧನೆಯ ಅಂಗವಾಗಿ ಪಂಚದಿನೋತ್ಸವವನ್ನು ಉದ್ಘಾಟಿಸಲು ಶ್ರೀಪಾದರಾಜ ಮಠದ ಉಭಯ ಶ್ರೀಪಾದಂಗಳವರಿಗೆ ಆಹ್ವಾನವನ್ನು ನೀಡಿದ್ದರು. ಶ್ರೀಸುಶಮೀಂದ್ರತೀರ್ಥರ ಬೃಂದಾವನದ ಸನ್ನಿಧಿಯಲ್ಲಿಯೇ ಶ್ರೀರಾಘವೇಂದ್ರಸ್ವಾಮಿ ಮಠದ ಮತ್ತು ಶ್ರೀಪಾದರಾಜ ಮಠದ ಸಂಸ್ಥಾನ ಪೂಜೆಯನ್ನು ನೆರವೇರಿಸಲಾಯಿತು. ಹಿರಿಯ ಶ್ರೀಗಳು ಮತ್ತು ಶ್ರೀಸುಶಮೀಂದ್ರತೀರ್ಥರ ಸ್ನೇಹವು ನಿಕಟವಾಗಿದುದರಿಂದ ಶ್ರೀವಿಜ್ಞಾನನಿಧಿತೀರ್ಥರು ತಮ್ಮ ದೇಹಾಲಸ್ಯವನ್ನು ಗಮನಿಸದೆ ಮಂತ್ರಾಲಯಕ್ಕೆ ಸುಶಮೀಂದ್ರರ ಆರಾಧನೆಯ ದಿವಸದಂದೇ ಮಂತ್ರಾಲಯಕ್ಕೆ ಧಾವಿಸಿ ಶ್ರೀರಾಘವೇಂದ್ರ ಸ್ವಾಮಿಗಳ ದರುಶನವನ್ನು ಪಡೆದರು.

**ವರದಿ: ಹೆಚ್.ಎಸ್. ಶ್ಯಾಮಾಚಾರ್**

**ಶ್ರೀ ಶ್ರೀಪಾದರಾಜಮಠ ರಾಘವೇಂದ್ರಕಾಲೋನಿ, ಚಾಮರಾಜಪೇಟೆ, ಬೆಂಗಳೂರು-560 018**





## ಸಂದೇಶ

ಅಧಿಕಮಾಸವನ್ನು **ಪುರುಷೋತ್ತಮಮಾಸ** ಎನ್ನುವುದು ರೂಢಿ. ಮೂರು ವರ್ಷಗಳಿಗೊಮ್ಮೆ ಆಚರಣೆಯಲ್ಲಿರುವ ಸಮಯವಿದು. ಪುರೋಷತ್ತಮರೂಪಿ ಪರಮಾತ್ಮ ನೇರವಾಗಿ ತನ್ನ ಭಕ್ತರಿಗೆ ಅನುಗ್ರಹಮಾಡುವ ಉದ್ದೇಶದಿಂದ ತಾನೇ ಅಧಿಪತಿ ಆಗುವ ಸುಸಂಧಿ.

ಈ ಮಾಸದಲ್ಲಿ ಸ್ನಾನ, ಜಪ-ತಪ, ಹೋಮ, ಧ್ಯಾನ ಮತ್ತು ಸಂಕೀರ್ತನೆಗೆ ವಿಶೇಷ ಆದ್ಯತೆ ಇರುತ್ತದೆ. ಯಾವುದೇ ಪದಾರ್ಥವನ್ನು 33 ಸಂಖ್ಯೆಯಲ್ಲಿ ದಾನಮಾಡುವ ಸಂಪ್ರದಾಯ ನಮ್ಮಲ್ಲಿ ಬೆಳೆದು ಬಂದಿದೆ. 33ರ ಸಂಕೇತವೆಂದರೆ 3+3=6 ಅರಿಷಡ್ವರ್ಗಗಳ ಮೇಲಿನ ಜಯ. 33=9 ನವವಿಧ ಭಕ್ತಿಯ ಸಂಕೇತ. 3/3=1 ಏಕೈಕನಾಥನಾದ ಪುರುಷೋತ್ತಮನನ್ನು ನೇರವಾಗಿ ಭಜಿಸುವ ತನ್ಮಯಚಿತ್ತ.

ಭಾಗವತಾದಿ ಪುರಾಣಗಳಲ್ಲಿ ಪ್ರಸ್ತಾಪಿತವಾಗಿರುವ ಹರಿಭಕ್ತಿದ್ಯೋತಕ ಉಪಾಖ್ಯಾನಗಳಲ್ಲಿ **ಶ್ರೀ ಬೃಹನ್ನಾರದೀಯ ಪುರಾಣವೂ ಒಂದು.**

ವ್ರತನಿಯಮಗಳ ಬಗೆಗೆ ಈಗಿನ ಜನಾಂಗಕ್ಕೆ ಆಸಕ್ತಿ ಕಡಿಮೆ ಆಗುತ್ತಿದೆ. ಅನಾದರವೂ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಮಕ್ಕಳಲ್ಲಿ ಸಾಂಪ್ರದಾಯಿಕ ಹಬ್ಬ ಹರಿದಿನ ಮತ್ತು ವ್ರತಾಚರಣ ಬಗೆಗೆ ಭಕ್ತಿ, ವಿಶ್ವಾಸ, ಆದರ, ಗೌರವ ಮತ್ತು ನಂಬಿಕೆ ಬಲಪಡಿಸುವ ಕಾರ್ಯ ಅತಿ ಅಗತ್ಯ. **ರಂಗವಿಠಲ** ಈ ದೃಷ್ಟಿಯಿಂದ ಅಭಿನಂದನಾರ್ಹವಾಗಿದ್ದಾನೆ.

**ನಾರಾಯಣಸ್ಮರಣೆಗಳು**

**ಶ್ರೀ ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರ**



## ಸಂದೇಶ

ಸಚ್ಛಾಸ್ತ್ರಗಳ ಸಾರ ಅರಿತು ಅದನ್ನು ಅನುಷ್ಠಾನಕ್ಕೆ **ತರಬೇಕು** ಎನ್ನುವುದು ಎಲ್ಲ ಭಕ್ತರ ಹಿರಿಯಾಸೆ. ಆದರೆ ಆಳವಾಗಿ ಶಾಸ್ತ್ರಗಳನ್ನು ಅಭ್ಯಾಸಮಾಡುವ ಅವಕಾಶ ಎಲ್ಲರಿಗೂ ಎಲ್ಲಿ ಸಿಗಬಲ್ಲದು?

ಈ ಪ್ರಶ್ನೆಗೆ ಉತ್ತರ ರೂಪವಾಗಿ ಅಧಿಕಮಾಸ ಬಂದಿದೆ. ಪರಮಾತ್ಮನ ಅನುಗ್ರಹಬೇಕೆಂದು ಆಶಿಸುವ ಭಕ್ತರಿಗೆ ಇದು ಸದವಕಾಶ. ದಾನ-ಧರ್ಮಗಳ ಮೂಲಕ ಶ್ರೀಹರಿಯ ಸೇವೆಗೆ ಇದು ಸಕಾಲ. **ಶ್ರೀ ಪುರುಷೋತ್ತಮಾಸಾಯ ನಮಃ** ಎಂದು ಸ್ತುತಿಸಲು ಶ್ರೀಕೃಷ್ಣ ಪರಮಾತ್ಮ ಪುರುಷೋತ್ತಮರೂಪದಿಂದ ಅಧಿಕಮಾಸದಲ್ಲಿ ಭಕ್ತರಿಗೆ ವಿಶೇಷ ಅನುಗ್ರಹವನ್ನು ನೀಡುತ್ತಾನೆ.

**ಭಕ್ತಿಯಲ್ಲಿ ಭಾಗಣ್ಣನೆಂದು ಪ್ರಸಿದ್ಧರಾದ ಗೋಪಾಲದಾಸರು** ಸರ್ವಕಾಲಿಕವಾದ ಮಾತೊಂದನ್ನು ಹೇಳಿದ್ದಾರೆ :

**ಭಕುತರೊಳು ತನ್ನಿಂದಧಿಕರನು**
**ಕಂಡರಲ್ಲಿ ಭಕುತಿಯನ್ನಿಟ್ಟು ಸೇವಿಪುದು**

**ವೈವಿಧ್ಯಮಯ ದಾನಧರ್ಮಗಳಿಂದ ಮತ್ತು ಸದಾಚಾರ ಸಂಪನ್ನತೆಯ ಸಮರ್ಪಣಾಭಾವದಿಂದ ಶ್ರೀಹರಿಯನ್ನು ಅರ್ಚಿಸಿ ಮೆಚ್ಚಿಸಲು ಅಧಿಕಮಾಸ ಸುಸಮಯ.**

**ನಾರಾಯಣಸ್ಮರಣೆಗಳು**

## ಶ್ರೀ ಶ್ರೀಪಾದರಾಜಮಠದ ಅಧಿಕಮಾಸದ ಕಾರ್ಯಕ್ರಮ

ಮುಳಬಾಗಿಲು ಪುರದ ಶ್ರೀಮಠದಲ್ಲಿ ಒಂದು ತಿಂಗಳು ಕಾಲ ಪ್ರತಿನಿತ್ಯವೂ **ಪವಮಾನ ಹೋಮ, ಭಜನಾ ಮಂಡಳಿಯಿಂದ ಭಜನೆ,** ವಿಶೇಷ ದಂಪತಿ ಭೋಜನ, ಅಪೂಪ ದಾನ ಹಾಗೂ ಸಂಜೆ ವಿಶೇಷ ಪ್ರವಚನಗಳು ಮತ್ತು ದೀಪಾರಾಧನೆಯನ್ನು ಹಮ್ಮಿಕೊಳ್ಳಲಾಗಿದೆ. ಶ್ರೀ ಶ್ರೀಪಾದರಾಜರ ಬೃಂದಾವನ ಸನ್ನಿಧಿಯಲ್ಲಿ ಒಂದು ತಿಂಗಳ ಕಾಲ ಕಿರಿಯ ಪೀಠಾಧಿಪತಿಗಳಾದ **ಶ್ರೀಕೇಶವನಿಧಿತೀರ್ಥ ಶ್ರೀಪಾದಂಗಳವರು** ವಿಶೇಷವಾದ ಅನುಷ್ಠಾನ ಪರರಾಗಿ ಶ್ರೀ ಶ್ರೀಪಾದರಾಜರ ಸನ್ನಿಧಿಯಲ್ಲಿಯೇ ಇರುವರು. ಈ ಸಂದರ್ಭದಲ್ಲಿ ಮೇ ಒಂದನೇ ತಾರೀಕು (01-05-2010) **ಅಧಿಕ ವೈಶಾಖ ಬಹುಳ ತದಿಗೆಯಂದು 108 ಬ್ರಾಹ್ಮಣ ಪೂಜಾ ಹಾಗೂ ಸಮಾರಾಧನೆ, ಅಪೂಪ ದೀಪ ಹಾಗೂ ವಸ್ತ್ರ ದಾನದಿಂದ ಪುರುಷೋತ್ತಮ ಪೂಜೆಯನ್ನು ನೆರವೇರಿಸುವರು.** 22-4-2010 ಗುರುಪುಷ್ಯಯೋಗವಿರುವುದರಿಂದ **ಶ್ರೀ ಶ್ರೀಪಾದರಾಜರಿಗೆ** 108 ಬ್ರಾಹ್ಮಣರಿಂದ ಅಷ್ಟೋತ್ತರ.

**ಬೆಂಗಳೂರಿನ ಶ್ರೀಮಠದಲ್ಲಿ** 17-4-2010 ಮತ್ತು 1-5-2010 ರಂದು ಸುದರ್ಶನ ಹೋಮ, 24-4-2010, 8-5-2010 ಪವಮಾನ ಹೋಮ, 18-4-2010 ಮತ್ತು 2-5-2010 ಶ್ರೀಸೂಕ್ತ ಹೋಮಗಳು.

ಪ್ರತಿದಿನ ಸಚ್ಛಾಸ್ತ್ರ ಪಾರಾಯಣ, ಬೆಳಿಗ್ಗೆ 11ರಿಂದ 12ರವರೆಗೆ ಪುರುಷೋತ್ತಮ ವಿಗ್ರಹಕ್ಕೆ ಪುಷ್ಪಾರ್ಚನೆ

ಸಂಜೆ 3 ರಿಂದ 4 ರವರೆಗೆ ರಾಮ ಭಜನಾಮಂಡಳಿ ನೇತೃತ್ವದಲ್ಲಿ ಭಜನಾ ಕಾರ್ಯಕ್ರಮ.

22-4-2010 ಗುರುಪುಷ್ಯಯೋಗವಿರುವುದರಿಂದ 108 ಬ್ರಾಹ್ಮಣರಿಂದ ಅಷ್ಟೋತ್ತರ.

ಪ್ರತಿನಿತ್ಯವೂ ಸಂಜೆ ವಿಶೇಷ ಪ್ರವಚನ ಹಾಗೂ ದೀಪಾರಾಧನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಇದೇ ಪ್ರಕಾರ ಹೊಸೂರು, ಶ್ರೀರಂಗ, ಪೆನುಗೊಂಡ, ಜಿಗಣಿ, ಕಾವೇರಿಪಟ್ಟಣದ ಶ್ರೀಮಠದ ಶಾಖೆಗಳಲ್ಲಿಯೂ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಬೆಂಗಳೂರು ಶಾಖೆಯಲ್ಲಿ **ಹಿರಿಯ ಪೀಠಾಧಿಪತಿಗಳಾದ ಶ್ರೀ ಶ್ರೀವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರ** ನೇತೃತ್ವದಲ್ಲಿ ಮೇಲ್ಕಂಡ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

**ಏಜೆಂಟ್, ಶ್ರೀಪಾದರಾಜಮಠ**

ಪ್ರಶ್ನೆ – ಉತ್ತರ
ಒಂದು ಅಧ್ಯಯನ

ವ್ರತ, ನೇಮಗಳನ್ನು ನಿಷ್ಠೆಯಿಂದ ಮಾಡುವಾಕೆ ಗೃಹಿಣಿ.
ಬೆಂಗಳೂರಿನ **ಸೌ|| ತ್ರಿವೇಣಿ ಆದೋನಿ ವಾಸುದೇವಾಚಾರ್ಯ**
ಇಂತಹ ಓರ್ವ ಗೃಹಿಣಿ. ಈಕೆಯ ಮಾತುಗಳು ಹೀಗಿವೆ.

# ಆತ್ಮಶೋಧನೆಗೆ ಮೆಟ್ಟಿಲು

**ಅಧಿಕಮಾಸದ ಬಗ್ಗೆ ಹೆಚ್ಚು ಸಾಹಿತ್ಯ ಸಿಕ್ಕಿಲ್ಲ ?**

ಈ ಬಗೆಗೆ ವೃಥಾ ಚಿಂತನೆ ಅನಗತ್ಯ. ಸಾಮಾನ್ಯವಾಗಿ ವ್ರತ, ಸಾಧನೆ, ದಾನ, ಧರ್ಮ ಎಂದಕೂಡಲೇ ಇವು **ಪರಲೋಕದ ಸಾಧನೆಯನ್ನು ಕುರಿತು ಚಿಂತಿಸುವ ಉಪಾಯಗಳು** ಎಂಬುವ ಅಭಿಪ್ರಾಯ ಬರುವುದು ಸಹಜ. ಆದರೆ ವಾಸ್ತವವಾಗಿ ಅಧಿಕಮಾಸದಂತಹ ವ್ರತಾಚರಣೆಯು ನಿತ್ಯಜೀವನದಲ್ಲಿ ಹರಿಭಕ್ತಿ ಪ್ರತಿಪಾದಿಸುವ ಅಪೂರ್ವ ಸಂದರ್ಭ.**ಈ ಮಾಸವು ಭಗವಂತನ ಆರಾಧನೆ ಮತ್ತು ಭಕ್ತನ ಆತ್ಮಶೋಧನೆಗೆ ಮೆಟ್ಟಿಲು ಇದ್ದಂತೆ.**

ನಿನ್ನ **ಚಿತ್ತಕ್ಕೆ** ಬಂದ **ಅನುಭವವೇ** ಸಾಧನವು, **ಮಾಧವ,** ನಿನ್ನ ನಾಮ **ಧರಿಸುವುದೇ ಎಮಗೆ ಸಾಧನವು, ತಾಪ ಯೋಚನೆಗಳೆಲ್ಲ** ತಪಸ್ಸು ವಿಭವ **ಗೋಪ ಚೂಡಾರತ್ನ ಜಯೇಶವಿಠಲ** – ಹೀಗೆ ವ್ರತ, ನಿಯಮ, ಉಪವಾಸ ಮೊದಲಾದ ಸಾಧನೆಗಳು ನಿಮಿತ್ತವಾಗಬೇಕೆ ವಿನಃ ಇದೇ **ಗುರಿಯಾಗಬಾರದು.** ನಮ್ಮ ಹರಿದಾಸರು ಹೇಳಿದ ಮಾತಿದು.

ಹತ್ತಿ, ಬತ್ತಿ, ರಂಗೋಲಿ, ಆರತಿ, ಲಾಲಿ, ಆಶೀರ್ವಾದ, ಶುಭಹಾರೈಕೆ, ದಾನ, ಧರ್ಮ, ವ್ರತ –ಈ ಎಲ್ಲ ಸಂಪ್ರದಾಯಗಳನ್ನು ಶ್ರದ್ಧೆಯಿಂದ ಆಚರಿಸಿದಂತೆಲ್ಲಾ ಸಮಾಜದಲ್ಲಿ ವ್ಯಕ್ತಿ ಸತ್ವಪೂರ್ಣ ಜೀವನ ನಡೆಸಲು ಸಾಧ್ಯವಾಗುತ್ತದೆ.

ಇದೇ ಸಂದರ್ಭದಲ್ಲಿ ಎಚ್ಚರಿಕೆಯ ದಾಸವಾಣಿಯೊಂದನ್ನು ಹೇಳಿದರೆ ಅಪ್ರಸ್ತುತವಾಗಲಾರದು.

ಜ್ಞಾನವೊಂದೇ ಸಾಕು ಮುಕ್ತಿಗೆ
ಇನ್ನೇನು ಬೇಕು ಹುಚ್ಚು ಮರುಳೆ
ವ್ರತನೇಮವ (ಅತಿಯಾಗಿ) ಮಾಡಿ ದಣಿಯಲುಬೇಡ
ಪುರಂದರವಿಠಲನ್ನ ಮರೆಯದಿರಬೇಡ

**ವಿಳಾಸ: ನಂ. 615, 8ನೇ ಬ್ಲಾಕ್, ಜಯನಗರ, ಬೆಂಗಳೂರು - 560 082.**





**ಪುರುಷೋತ್ತಮಮಾಸದ**

# ಅಧಿಕಮಾಸದಿಂದ ಪುನರ್‌ಜನ್ಮಪಡೆದ ರಾಜ

**ದೃಢಧನ್ವನ** ಕಥೆ ಅಧಿಕಮಾಸದ ಮಹತ್ವವನ್ನು ಒತ್ತಿ ಹೇಳುವ ಒಂದು ಪ್ರಕರಣ. ಈ ಕಥೆಯನ್ನು ಶ್ರೀಮನ್ ನಾರಾಯಣ ತ್ರಿಲೋಕ ಸಂಚಾರಿ ನಾರದರಿಗೆ ಹೇಳಿದ್ದಾನೆ. ಶ್ರೀಬೃಹನ್ನಾರದೀಯ ಪುರಾಣದ 14ನೇ ಅಧ್ಯಾಯದಲ್ಲಿ ಇದರ ಪ್ರಸ್ತಾಪವಿದೆ.

ದೃಢಧನ್ವ ಹೈಹಯ ಎನ್ನುವ ದೇಶದ ಅಧಿಪತಿ. ನ್ಯಾಯನಿಷ್ಠೆಯಿಂದ ರಾಜ್ಯಭಾರ ನಡೆಸುತ್ತಿದ್ದ. ಒಮ್ಮೆ ಈತ ಅರಣ್ಯದಲ್ಲಿ ಸಂಚರಿಸುತ್ತಿದ್ದಾಗ ಮರದ ಮೇಲಿದ್ದ ಗಿಳಿ ಶ್ಲೋಕವೊಂದನ್ನು ಮತ್ತೆ ಮತ್ತೆ ಪುನರುಚ್ಚರಿಸುವುದು ಕೇಳಿಸಿತು. ದೃಢಧನ್ವನಿಗೆ ಅಚ್ಚರಿಯೂ ಆಯಿತು. ಇದರ ಅರ್ಥ ತಿಳಿಯುವ ಕುತೂಹಲ ಹೆಚ್ಚಿತು.

ರಾಜ ದೃಢಧನ್ವ ವಾಲ್ಮೀಕಿ ಋಷಿಗಳ ಬಳಿ ಬಂದು ಗಿಳಿಯಿಂದ ಕೇಳಿದ ಶ್ಲೋಕವನ್ನು ಹೇಳಿ, ಇದರ ರಹಸ್ಯ ಭೇದಿಸುವಂತೆ ಪ್ರಾರ್ಥಿಸಿದ. ವಾಲ್ಮೀಕಿ ಋಷಿ ಗಿಳಿ ಮಾತಿನ ಅರ್ಥ ಹೇಳಿದರು.

ಪುತ್ರ ಸಂತಾನಕ್ಕಾಗಿ **ಸುದೇವ -ಗೌತಮಿ** ಎಂಬ ದಂಪತಿಗಳು ದೀರ್ಘತಪಸ್ಸು ಮಾಡುತ್ತಿರುತ್ತಾರೆ. ಆದರೆ ಬ್ರಹ್ಮಬರಹದಲ್ಲಿ ಸಂತಾನಪ್ರಾಪ್ತಿ ಇರುವುದಿಲ್ಲ . ಇಷ್ಟಿದ್ದರೂ ತಪಸ್ಸಿಗೆ ಮೆಚ್ಚಿದ ಶ್ರೀಮನ್ನಾರಾಯಣ ಅವರಿಗೆ ಪುತ್ರನನ್ನು ಕರುಣಿಸುತ್ತಾನೆ.

ಸುದೇವ – ಗೌತಮಿಯರ ಮಗ ಬಾಲಕನಿದ್ದಾಗ ಸರೋವರದಲ್ಲಿ ಆಟವಾಡಲು ಹೋಗಿ ಮುಳುಗಿ ಸಾವನ್ನಪ್ಪುತ್ತಾನೆ. ಶೋಕತಪ್ತ ತಂದೆ – ತಾಯಿಗಳು ಅಂದು ಬಂದಿದ್ದ ಅಧಿಕಮಾಸವನ್ನು ಶ್ರದ್ಧೆ , ಭಕ್ತಿಗಳಿಂದ ಆಚರಿಸುತ್ತಾರೆ. ಇದರ ಫಲಪ್ರಾಪ್ತಿಯಿಂದ ಮಗ ಪುನಃ ಜೀವಂತವಾಗಿ ದೀರ್ಘಾಯುಷಿಯಾದ.

ವಿಶೇಷವೆಂದರೆ **''ಅಧಿಕಮಾಸದ ಪುಣ್ಯಫಲದಿಂದ ಮರುಜನ್ಮ ಪಡೆದ ವ್ಯಕ್ತಿ ನೀನೇ''** ಎಂದು ವಾಲ್ಮೀಕಿ ಮಹರ್ಷಿಗಳು ದೃಢಧನ್ವ ಮಹಾರಾಜನಿಗೆ ಗಿಳಿಯ ಮಾತುಗಳ ರಹಸ್ಯ ಬಯಲುಮಾಡುತ್ತಾರೆ.

ಶ್ರೀ [illegible]ನನಿಧಿತೀರ್ಥರು

ಪುರುಷೋತಮಮಾಸದ

## ಧನು ಋಷಿಯ ಮಗನ ಕಥೆ

**ರಘುರಾಜ** ಎಂಬ ಸಚ್ಚಾರಿತ್ರ್ಯ ವ್ಯಕ್ತಿ ಭಗವಂತನ ಅನನ್ಯಸೇವೆ ಅರ್ಚನೆಗಳಿಂದ ಮಹಾರಾಜನಾಗುತ್ತಾನೆ. ಅನೇಕ ಪುಣ್ಯಕಾರ್ಯಗಳಿಂದ ಸುಖಿಯಾಗಿರುತ್ತಾನೆ. ಆದರೆ ಹಲವು ರಾಜಮಹಾರಾಜರು ಅಲ್ಪಾಯುಷಿಗಳಾಗಿ ಗತಿಸಿದ ಸಂದರ್ಭಗಳನ್ನು ಕುರಿತು ಚಿಂತಿಸುತ್ತಿರುತ್ತಾನೆ. ಅದೃಷ್ಟವಶಾತ್ **ಜ್ಞಾನಿಗಳಾದ ಮಾರ್ಕಂಡೇಯ ಮಹಾಮುನಿಗಳಾದ** ರಘುರಾಜನಲ್ಲಿಗೆ ಬರುತ್ತಾರೆ. ರುದ್ರಾಂಶರಾದ ಮಾರ್ಕಂಡೇಯ ಋಷಿಗಳೊಂದಿಗೆ ತನ್ನ ಚಿಂತೆ ಹಂಚಿಕೊಳ್ಳುತ್ತಾನೆ.

ಮಾರ್ಕಂಡೇಯ ಮಹಾಮುನಿಗಳು **ಧನು ಋಷಿಯ ಮಗನ ಕಥೆಯನ್ನು ಹೇಳುತ್ತಾರೆ.**

**ಧನು** ಎಂಬ ಋಷಿಯೊಬ್ಬನಿದ್ದ. ಆತ ದೀರ್ಘಾಯುಷಿ. ಪುತ್ರನನ್ನು ತಪಸ್ಸು ಮಾಡಿ ಪಡೆದ.ಎದುರಿಗಿದ್ದ ಮಹಾನ್ ಪರ್ವತವನ್ನು ತೋರಿಸಿ ಇದರಂತೆ ದೀರ್ಘಾಯುಷಿಯಾದ ಮಗನನ್ನು ಕರುಣಿಸು ಎಂದು ಪರಮಾತ್ಮನನ್ನು ಕೋರಿದ. ವರಸಿದ್ಧಿಸಿತು. ಧನುವಿಗೆ ಮಗ ಹುಟ್ಟಿದ.

ಆದರೆ ಧನುವಿನ ಮಗ ಒಳ್ಳೆಯ ಗುಣಗಳನ್ನು ಕಲಿಯದೆ ದುಷ್ಟನಾಗಿ ಬೆಳೆದ. ಧನುವಿಗೆ ಈ ವಿಷಯ ತಿಳಿಯುವುದರೊಳಗೆ ಕಾಲ ಮಿಂಚಿತ್ತು. ಸಮಾಜ ಘಾತುಕನಾದ ಮಗನಿಂದ ಮೇಲಿಂದ ಮೇಲೆ ದೌರ್ಜನ್ಯ, ಪಾಪಕರ್ಮ ನಡೆಯುತ್ತಿತ್ತು.

ಒಮ್ಮೆ **ಮಹರ್ಷಿಯೊಬ್ಬನು ಪೂಜಿಸುತ್ತಿದ್ದ ಸಾಲಿಗ್ರಾಮವನ್ನು ಧನುವಿನ ಮಗ ನೀರಿಗೆಸೆದ.** ಕೋಪಗೊಂಡ ಋಷಿ ಶಾಪವಿತ್ತನು. ದೇವರಿಂದ ದೀರ್ಘಾಯುಷ್ಯವನ್ನು ವರ ಪಡೆದ ಧನುವಿನ ಮಗ ಸಾಯಲಿಲ್ಲ.

ಮಹರ್ಷಿಗಳು ಸುಮ್ಮನಾಗಲಿಲ್ಲ. ಕಾಡು ಕೋಣಗಳನ್ನು ಸೃಷ್ಟಿಸಿದರು. ಪರ್ವತವನ್ನುರುಳಿಸಿದರು. ಧನುವಿನ ಮಗ ನಾಶವಾದ.

ವಾಲ್ಮೀಕಿ ಮಹರ್ಷಿಗಳು ಧನುವಿನ ಮಗನ ವೃತ್ತಾಂತ ತಿಳಿಸಿ ಪುರುಷೋತ್ತಮ ಮಾಸದ ಬಗೆಗಿನ ಅಲಕ್ಷ್ಯ - ಅಸಡ್ಡೆ ಈತನ ನಾಶಕ್ಕೆ ಕಾರಣವಾಯಿತು ಎಂದರು.





**ರಂಗವಿಠಲ** ಪತ್ರಿಕೆಯ ಶ್ರದ್ಧಾಪೂರ್ಣ ಲೇಖಕಿ, ಬೆಂಗಳೂರಿನ ಗೃಹಿಣಿ **ಶ್ರೀಮತಿ ಶಕುಂತಲಾ ಜಾಗೀರದಾರ**ರನ್ನು ಪುರುಷೋತ್ತಮಮಾಸಕ್ಕಾಗಿ ಪ್ರಶ್ನಿಸಿದಾಗ

## ಹರುಷದಿಂದ ನಿನ್ನ ನಾಮ ಸ್ಮರಿಸುವಂತೆ ಮಾಡು - ಪುರುಷೋತ್ತಮ

**ಅಧಿಕಮಾಸವೆಂದಕೂಡಲೆ ನಿಮ್ಮ ನೆನಪಿಗೆ ಬರುವ ಕೃತಿಯಾವುದು ?**

ಶ್ರೀಹರಿಕಥಾಮೃತಸಾರದ ವ್ಯಾಪ್ತಿ ಸಂಧಿ ನೆನಪಾಗುತ್ತದೆ. ಪುರಾತನ ಪುರುಷ, ಪುರುಷೋತ್ತಮ, ಕ್ಷರಾಕ್ಷರ ಪುರುಷ, ಪೂಜಿಪ ಚರಣ, ಪರಿಪೂರ್ಣ ಆನಂದ, ಪ್ರತಿಪಾದ್ಯ -ಹೀಗೆ ಪರಮಾತ್ಮನ ರೂಪಗಳನ್ನು ಶ್ರೀಜಗನ್ನಾಥದಾಸರು ವಿಸ್ತಾರವಾಗಿ ವಿವರಿಸುವ ಮೂಲಕ ಪುರುಷೋತ್ತಮಮಾಸಕ್ಕೆ ಹೊಸ ಅರ್ಥಕೊಟ್ಟಿದ್ದಾರೆ.

ಭಕ್ತಿ, ಆರ್ತಭಾವ, ಲೋಕನೀತಿ, ಸಮರ್ಪಣಾ ಮನೋಭಾವ ಹರಿಸರ್ವೋತ್ತಮತ್ವ -ಇವೇ ಮೊದಲಾದ ಗುಣವಿಶೇಷಣಗಳಿಂದ ಶ್ರೀಹರಿಯ ಅನುಸಂಧಾನಕ್ಕೆ ಮಹಾಮಹಿಮರಾದ ಜಗನ್ನಾಥದಾಸರು ಮನೋವೇದಿಕೆಯನ್ನು ಸಿದ್ಧಪಡಿಸುತ್ತಾರೆ.

**ಪುರುಷೋತ್ತಮನನ್ನು ಕುರಿತ ಎರಡನೆಯ ಕೀರ್ತನೆ ಹೇಳಿ ?**

**ಕನಕದಾಸರ ಕೇಶವನಾಮ** ಪುರುಷೋತ್ತಮನನ್ನು ಪ್ರಧಾನವಾಗಿ ನೆನಪಿಗೆ ತರುವ ಕೃತಿಗಳಲ್ಲೊಂದು. **ಲೋಕಗುರುಗಳಾದ ಶ್ರೀ ವ್ಯಾಸರಾಜರ** ಆದೇಶದಂತೆ ಜನರ ಮೂಢನಂಬಿಕೆಗಳನ್ನು ಪರಿಹರಿಸಿ, **ಅಂತರಂಗದಲ್ಲಿ ವಿಷ್ಣುಭಕ್ತಿ ನೆಲೆಸುವಂತೆ ಮಾಡಿದ್ದಾರೆ ಶ್ರೀ ಕನಕದಾಸರು.**

ಹರುಷದಿಂದ ನಿನ್ನ ನಾಮ ಸ್ಮರಿಸುವಂತೆ ಮಾಡು
ಪ್ರೇಮವಿರಿಸು, ನಿನ್ನ ಚರಣದಲ್ಲಿ ಪುರುಷೋತ್ತಮ

- ಎನ್ನುವ ಸಮರ್ಪಣ ಸ್ತುತಿಯಿಂದ **ಹರಿಭಕ್ತ ಕನಕದಾಸರು ಜಗತ್ತಿಗೆ ವ್ರತ, ನಿಯಮ, ಉಪಾಸನೆಗಳಿಗೆ ಹೊಸ ಆಯಾಮವನ್ನು ಸೃಷ್ಟಿಸಿಕೊಡುತ್ತಾರೆ.**

**ವಿಳಾಸ: ನಂ. 766, 5ನೇ ಮುಖ್ಯರಸ್ತೆ, ಮಹಾಲಕ್ಷ್ಮೀಪುರ, ಬೆಂಗಳೂರು - 560086**

ಶ್ರೀ ಪುರುಷೋತ್ತಮ ಮಾಸ :

ಪ್ರಶ್ನೆ – ಉತ್ತರ
ಒಂದು ಅಧ್ಯಯನ

ಆಕ್ಸಿಜನ್‌ನಂತಹ ಸೂಕ್ಷ್ಮವಸ್ತುಗಳ
ವಾಣಿಜ್ಯತಜ್ಞರು, ಬೆಂಗಳೂರಿನ **ಶ್ರೀ ಶ್ರೀನಾಥ ಕೊನೇಟಿ,**
ದಾಸಸಾಹಿತ್ಯ ಅಭಿಮಾನಿ ಇವರೊಂದಿಗೆ ಸಂದರ್ಶನ

## ಮುಂದಿನ ಪೀಳಿಗೆ ನಮ್ಮನ್ನು ನೋಡುತ್ತಿದೆ

### ಪುರುಷೋತ್ತಮಮಾಸದ ಬಗೆಗೆ ನಿಮ್ಮನ್ನು ಏನೆಂದು ಪ್ರಶ್ನಿಸಬಹುದು?

ರಂಗವಿಠಲನಂತಹ ಉದಾರ ಚಿಂತನೆಯ ಪತ್ರಿಕೆಗಳು ಧಾರ್ಮಿಕ ಜಗತ್ತಿನಲ್ಲಿ ಹೊಸ ಚಿಂತನೆ ಮತ್ತು ಆವಿಷ್ಕಾರಗಳನ್ನು ಮೂಡಿಸುತ್ತಿವೆ. ಇದೊಂದು ಶುಭ ಸಂಕೇತ.

ನೂರು ವರ್ಷಗಳ ಹಿಂದೆ ನಾವು ನಮ್ಮ ಹಿರಿಯರನ್ನು ಅಧಿಕಮಾಸ ಎಂದರೆ ಏನು? ಎಂದು ಧೈರ್ಯವಾಗಿ ಕೇಳುವಂತಿರಲಿಲ್ಲ. ನಮ್ಮ ಮನಸ್ಸಿನ ಭಾವನೆಯನ್ನು ವ್ಯಕ್ತಪಡಿಸುವುದು ಹಿಂದಿನಕಾಲದಲ್ಲಿ ಉದ್ಧಟತನ ಆಗುತ್ತಿತ್ತು.

ಮುಂದಿನ ಜನಾಂಗ ನಾವು ಈವರೆಗೆ ನಡೆಸಿಕೊಂಡು ಬಂದ ವ್ರತನೇಮಗಳನ್ನು ಬಹು ಎಚ್ಚರಿಕೆಯಿಂದ ನೋಡುತ್ತಿರುತ್ತಾರೆ. ಭಗವಂತನ ಭಕ್ತಿಯನ್ನು ಸುಲಭವಾಗಿ ಗಳಿಸುವ ಮಾರ್ಗ ಕುರಿತು ಇಂದಿನ ಮಕ್ಕಳಿಗೆ ಸಹಿತ ಆಸಕ್ತಿ ಇದೆ. ಉತ್ಸಾಹ ಇದೆ.

**ವಿಳಾಸ : 149/ವೈ, ಮಹಡಿ, 50ನೇ ಅಡ್ಡರಸ್ತೆ, ರಾಜಾಜಿನಗರ, 3ನೇ ಹಂತ, ಬೆಂಗಳೂರು.**

ವ್ಯಾಸರಾಯರು **'ಅಧಿಕ'** ಎಂಬ ಪದವನ್ನು ದಾಸಸಾಹಿತ್ಯದಲ್ಲಿ ಮೊದಲಬಾರಿಗೆ ಬಳಸಿದಂತೆ ಕಾಣುತ್ತದೆ. ಶ್ರೀಮದಾನಂದತೀರ್ಥ ಭಗವತ್ಪಾದರ ಗುಣವಿಶೇಷಣಗಳನ್ನು ವರ್ಣಿಸುವ ಕೀರ್ತನೆಯಲ್ಲಿ ಅಧಿಕಲಕ್ಷಣ ಪ್ರಯೋಗವನ್ನು ಕಾಣಬಹುದು.

ಆರು ನಿನಗಧಿಕ ಧಾರುಣಿಯೊಳಗೆ ಎಂದು ಸರ್ವಜ್ಞ ಮುನಿರಾಯರನ್ನು ವಂದಿಸುತ್ತಾರೆ. ವ್ಯಾಸರಾಯರು ವೈಷ್ಣವ ಧರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿದ ಆಚಾರ್ಯಮಧ್ವರ ತತ್ವಸಿದ್ಧಾಂತಗಳನ್ನು ವರ್ಣಿಸುತ್ತಾ ತತ್ವದಭಿಮಾನಿಗಳಿಗೆ ಒಡೆಯ ಎನ್ನುತ್ತಾರೆ. ಮಾರುತನ ಮೂರನೆಯ ಅವತಾರವಾದ ಮುನಿಶ್ರೇಷ್ಠ ಆಚಾರ್ಯರನ್ನು ಆರೈದು (65) ಮೇಲೆರಡು ಮತ್ತೊಂದು ಅಧಿಕ ಲಕ್ಷಣವುಳ್ಳ (32+1) ಮೂರುತಿಯೊಳುಪ್ಪುತಿಹ ಉದಾರ ಶ್ರೀಕೃಷ್ಣನ ದಾಸರ ದೊರೆಯೆ ಎಂದು ಅತ್ಯಂತ ಸೂಚ್ಯವಾಗಿ ಬಣ್ಣಿಸುತ್ತಾರೆ.

Email **ಮೂಲಕ ಲೇಖನ ಸಂಗ್ರಹ : ಡಾ|| ತಾರಾ ಜಯತೀರ್ಥಕುಲಕರ್ಣಿ.**
**ಇಂಧನ ವಿಜ್ಞಾನಿ, ಸಿನ್ಸಿನಾಟಿ, ಅಮೇರಿಕ.**



**ಪುರುಷೋತ್ತಮಮಾಸದ**

## ದುಷ್ಟತನ ಬಿಡಿಸಿದ ಪುರುಷೋತ್ತಮಮಾಸ

ಪೂರ್ವಜನ್ಮದ ಪುಣ್ಯ ಫಲದಿಂದ ಪ್ರಸ್ತುತ ಸುಖಿಯಾದ ರಾಜ **ಚಿತ್ರಬಾಹುವಿನ** ಕಥೆ ಹೀಗಿದೆ. **ಅಗಸ್ತ್ಯ ಮಹಾಮುನಿಗಳು ಹೇಳಿದ ಪ್ರಸಂಗ ಇದು.**

ಚಿತ್ರಬಾಹು ಎಂಬಾತ ಸೌಭಾಗ್ಯ ನಗರದ ರಾಜ. ಭಗವದ್ಭಕ್ತ. ದಾನಿ, ಸಹೃದಯಿ, ಸಜ್ಜನ ಮತ್ತು ನೇಮಿಷ್ಠ. ಒಮ್ಮೆ ಅಗಸ್ತ್ಯಋಷಿಗಳು ತನ್ನಲ್ಲಿಗೆ ಬಂದಾಗ ಚಿತ್ರಬಾಹು ತನ್ನ ಸಂತೃಪ್ತ ಜೀವನದ ಹಿನ್ನೆಲೆಯನ್ನು ತಿಳಿಯುವ ಅಭಿಲಾಷೆ ವ್ಯಕ್ತಪಡಿಸುತ್ತಾನೆ. ಅಗಸ್ತ್ಯರು, ರಾಜನ ಇಚ್ಛೆಯಂತೆ ಹಿನ್ನೆಲೆ ತಿಳಿಸುತ್ತಾರೆ.

ಪೂರ್ವಜನ್ಮದಲ್ಲಿ ಚಿತ್ರಬಾಹುವು **ಮಣಿಗ್ರೀವ** ಎಂಬ ಕಿರಾತನಾಗಿದ್ದ. ದುಷ್ಟತನ, ಕ್ರೂರತ್ವ, ಹಿಂಸೆಗಳ ಮೂರ್ತಿವೆತ್ತಂತಿದ್ದ ದುರಾಚಾರಿ ಆಗಿದ್ದ. ಈತನ ಕಾಟ ಸಹಿಸಲಾಗದ ಪ್ರಜೆಗಳು ದಂಗೆಯೆದ್ದು ಈತನನ್ನು ಗಡೀಪಾರು ಮಾಡಿದ್ದರು.

ಕಾಡಿಗೆ ಬಂದ ಏಕಾಂಗಿ ಮಣಿಗ್ರೀವ ಪರಮಾತ್ಮನ ಮೊರೆಹೊಕ್ಕ. ಭಗವಂತನ ಧ್ಯಾನ ಮಣಿಗ್ರೀವನ ಕಣ್ಣು ತೆರೆಸಿತು. ಸಜ್ಜನನಾದ. ಅರಣ್ಯದಲ್ಲಿ ಆಯಾಸದಿಂದ ನಿಶ್ಶಕ್ತನಾಗಿ ಬಿದ್ದಿದ್ದ **ಉಗ್ರದೇವ** ಎಂಬ ಮುನಿಯನ್ನು ಮಣಿಗ್ರೀವ ರಕ್ಷಿಸಿದ. ಉಗ್ರದೇವನಿಗೆ ಮಣಿಗ್ರೀವನ ಸದಾಚಾರ-ಸದ್ವರ್ತನೆ ಹಿಡಿಸಿತು.

ಉಗ್ರದೇವ ಮುನಿ ಮಣಿಗ್ರೀವನಿಗೆ ಮತ್ತಷ್ಟು ಒಳ್ಳೆಯ ಸಂಸ್ಕಾರಗಳನ್ನು ಉಪದೇಶಿಸಿದ. ಅಧಿಕಮಾಸ ಬಂದಾಗ ಪುರುಷೋತ್ತಮನನ್ನು ಅನನ್ಯ ಭಕ್ತಿಯಿಂದ ಆರಾಧಿಸಲು ಉಪದೇಶಿಸಿದ. **ಪರಿವರ್ತಿತನಾದ ಮಣಿಗ್ರೀವ ಮುಂದಿನ ಜನ್ಮದಲ್ಲಿ ಚಿತ್ರಬಾಹುವಾಗಿ ಜನಿಸಿದ.** ಇದು ಬೃಹನ್ನಾರಾದೀಯ ಪುರಾಣಕಥೆ.

**ಶ್ರೀ ಶ್ರೀಕೇಶವನಿಧಿತೀರ್ಥರು**

ಪುರುಷೋತ್ತಮಮಾಸದ
ಕಥೆಗಳು

## ಪುರುಷೋತ್ತಮಮಾಸ ಅಲಕ್ಷಿಸಿದ್ದ ದ್ರೌಪದಿ

**ಇದು ಪಾಂಡವರ ಧರ್ಮಪತ್ನಿ ಪಾಂಚಲಿಯ (ದ್ರೌಪದಿಯ) ಪೂರ್ವಜನ್ಮದ ವೃತ್ತಾಂತ.** ಶ್ರೀ ಬೃಹನ್ನಾರದೀಯ ಪುರಾಣದಲ್ಲಿ ಇದರ ಉಲ್ಲೇಖವಿದೆ.

ದ್ರೌಪದಿ ಹಿಂದಿನ ಜನ್ಮದಲ್ಲಿ **ಮಾಧವ** ಎನ್ನುವ ಬ್ರಾಹ್ಮಣನ ಮಗಳು. ಹುಟ್ಟಿದ ಕೂಡಲೇ ತಾಯಿ ಮೃತಳಾಗುತ್ತಾಳೆ. ತಂದೆ ಅಕ್ಕರೆಯಿಂದ ಸಾಕಿರುತ್ತಾನೆ. ಕನ್ಯೆಗೆ ವರ ಹುಡುಕುವ ಪ್ರಯತ್ನದಲ್ಲಿದ್ದಾಗಲೇ ಮಾಧವ ಮೃತನಾಗುತ್ತಾನೆ.

ದುಃಖಿತಪ್ತಳಾಗಿ ಕನ್ಯೆ ತಂದೆಯ ಶರೀರದ ಮುಂದೆ ಶೋಕಿಸುತ್ತಿದ್ದ ಸಮಯದಲ್ಲಿ ಋಷಿ ಸಮೂಹವೊಂದು ಅಲ್ಲಿಗೆ ಬರುತ್ತದೆ. ಸಂಸ್ಕಾರದ ಬಳಿಕ ವಂದಿಸಿದ ಕನ್ಯೆಗೆ ದೂರ್ವಾಸ ಮಹಾಮುನಿಗಳು ಕರುಣೆಯಿಂದ ವರನೀಡುತ್ತಾರೆ. **ವ್ರತನಿಯಮಗಳನ್ನು ಅನುಸರಿಸದ ಕನ್ಯೆ ಋಷಿವೃಂದದ ಅವಕೃಪೆಗೆ ಒಳಗಾಗುತ್ತಾಳೆ.**

**ಕನ್ಯೆ ಮತ್ತೆ ಮತ್ತೆ ಐದು ಬಾರಿ ಪತಿಕರುಣೆಗಾಗಿ ದೂರ್ವಾಸ ಋಷಿಗಳನ್ನು ಒತ್ತಾಯಿಸಿದಾಗ ಮುಂದಿನ ಜನ್ಮದಲ್ಲಿ ಇದು ಸಿದ್ಧಿಸಿ ಐವರು ಗಂಡಂದಿರು ದೊರಕುವಂತಾಗಲಿ ಎಂದು ಆಶೀರ್ವದಿಸುತ್ತಾರೆ.**

ದ್ವಾಪರಯುಗ ಬರುತ್ತದೆ. ದ್ವಾಪರದಲ್ಲಿ ಆ ಕನ್ಯೆ ದ್ರುಪದನ ಪುತ್ರಿಯಾಗಿ ಜನಿಸುತ್ತಾಳೆ. ಬಂಧುತ್ವದಲ್ಲಿ ಶ್ರೀಕೃಷ್ಣನ ತಂಗಿ ಆಗುತ್ತಾಳೆ. **ಹಿಂದಿನ ಜನ್ಮದಲ್ಲಿ ಪುರುಷೋತ್ತಮಮಾಸದಂತಹ ಪರ್ವಕಾಲದಲ್ಲಿ ವ್ರತಾದಿಗಳನ್ನು ಮಾಡದ ತಪ್ಪಿನ ಫಲ ಪುನರ್ ಜನ್ಮದಲ್ಲಿಯೂ ಮುಂದುವರೆಯುತ್ತದೆ. ದ್ರೌಪತಿ ಧೈರ್ಯಶಾಲಿಗಳಾದ ಪಾಂಡವರ ಪತ್ನಿಯಾದರೂ ಹಲವು ಕಷ್ಟನಷ್ಟ ನೋವುಗಳನ್ನನುಭವಿಸುತ್ತಾಳೆ. ಶ್ರೀಕೃಷ್ಣನ ಅನನ್ಯ ಭಕ್ತಿಯ ಸೇವೆಯಿಂದ ಕ್ರಮೇಣ ದ್ರೌಪದಿಗಿದ್ದ ಪೂರ್ವಜನ್ಮದ ಕರ್ಮಗಳು ಸವೆಯುತ್ತವೆ.**

**ಶ್ರೀ ಶ್ರೀಕೇಶವನಿಧಿತೀರ್ಥರು**





ಹುಲಗಿ ಶ್ರೀಕಾಂತಾಚಾರ್ಯರ ವಂಶಸ್ಥರಾದ
ನಾಡಿನ ಹಿರಿಯ ಪತ್ರಕರ್ತ, ರಾಜ್ಯ ಪ್ರಶಸ್ತಿ ವಿಜೇತ
**ಹುಲಗಿ ವಾಸುದೇವಾಚಾರ್ಯ**ರನ್ನು ಫೋನಿನಲ್ಲಿ ಸಂಪರ್ಕಿಸಿದಾಗ

## ಹುಲಗಿ ಆಚಾರ್ಯರ ಸ್ಮರಣೆ

**ಕೊಪ್ಪಳ ಪ್ರಾಂತ್ಯದಲ್ಲಿ 'ಪುರುಷೋತ್ತಮಮಾಸದ' ವಿಶೇಷವೇನು?**

ಈ ಭಾಗದಲ್ಲಿ ಇದು ಎಲ್ಲ ಜಾತಿ, ಮತ ಮತ್ತು ಧರ್ಮಸಮಾನ ಮನಸ್ಕತೆಯಲ್ಲಿ ನಡೆದಿರುವ ಸಾಂಪ್ರದಾಯಿಕ ಪ್ರಕ್ರಿಯೆ. **ತ್ಯಾಗ, ದಾನ, ಧರ್ಮ ಮತ್ತು ಭಗವಂತನ ಪ್ರಸಾದವನ್ನು ಹಂಚಿತಿನ್ನುವ ಮೂಲಚಿಂತನೆ ಅಧಿಕಮಾಸದ ವೈಶಿಷ್ಟ್ಯ.**

ರಾಯಚೂರು, ಬಳ್ಳಾರಿ, ಕೊಪ್ಪಳ, ಗುಲಬರ್ಗಾ ಮತ್ತು ಬಿಜಾಪುರಗಳಂಥ ಹರಿದಾಸರುಗಳು ನಡೆದಾಡಿದ ಪ್ರಾಂತ್ಯದಲ್ಲಿ ಇಂದಿಗೂ **ಹರಿಸರ್ವೋತ್ತಮತ್ವದ ಭವ್ಯ ಚಿಂತನೆಯ ಅಡಿಯಲ್ಲಿ ಅಧಿಕಮಾಸದ ಆಚರಣೆ ಜನಪ್ರಿಯವಾಗಿದೆ.** ಅಪೂಪದಾನ ಪ್ರಾಯಶಃ ಇಲ್ಲಿ ನಡೆಯುವಷ್ಟು ಪ್ರಮಾಣದಲ್ಲಿ ಬೇರೆಡೆ ನಡೆದಿಲ್ಲವೆಂದರೂ ತಪ್ಪಿಲ್ಲ.

**ನಿಮ್ಮ ವಂಶಸ್ಥರು ಈ ವ್ರತವನ್ನು ಹೇಗೆ ಆಚರಿಸಿದರು ?**

ಹಿರಿಯ ತತ್ವಜ್ಞಾನಿ ಹುಲಗಿ ಶ್ರೀಕಾಂತಾಚಾರ್ಯರ ವಂಶಸ್ಥರು ನಾವು. ''ಜಯ ಕೊಲ್ಲಾಪುರ ನಿಲಯೇ'' ಎನ್ನುವ ಕೃತಿ ರಚನೆ ಮಾಡಿದವರು ನಮ್ಮ ಹಿರಿಯರು. ದ್ವೈತ-ದ್ಯುಮಣಿ ಎನ್ನುವ ಶೀರ್ಷಿಕೆಯೊಂದಿಗೆ ಶ್ರೀ ಉತ್ತರಾದಿ ಮಠಾಧೀಶರ ಮಾರ್ಗದರ್ಶನದಲ್ಲಿ ಹರಿಸರ್ವೋತ್ತ್ವಮ ತತ್ವಗಳನ್ನು ಪ್ರಚಾರ ಮಾಡಿದ ಮಹನೀಯರು ಇಲ್ಲಿನ ಭಕ್ತರು.

ಹುಲಿಗೆ ಆಚಾರ್ಯರು ಹೇಳಿರುವಂತೆ ಅಧಿಕಮಾಸದ ದಾನಧರ್ಮಗಳಿಗೆ ಭಕ್ತಿಯೇ ಮೂಲ ಪ್ರೇರಣೆ. ದೇಶೀಯ ಹಬ್ಬಹರಿದಿನಗಳನ್ನು ಭಕ್ತಿಪೂರ್ವಕವಾಗಿ ಆಚರಿಸಿ. ಇವು ಬದುಕಿಗೆ ತೃಪ್ತಿ, ಹರ್ಷತಂದು ಕೊಡುತ್ತವೆ ಎಂದು ಹೇಳಿದ್ದರು. ನಮ್ಮ ಹಿರಿಯರನ್ನು ಅಧಿಕಮಾಸದ ಈ ಸಂದರ್ಭದಲ್ಲಿ ನೆನೆಪಿಸಿಕೊಳ್ಳಲು ಹೆಮ್ಮೆಯಾಗುತ್ತಿದೆ.

**ವಿಳಾಸ: ಡಾ. ಸಿಂಪಿ ಲಿಂಗಣ್ಣ ರಸ್ತೆ ಕೊಪ್ಪಳ - 583 231**

**ಶ್ರೀ ಪುರುಷೋತ್ತಮ ಮಾಸ :**

ಪ್ರಶ್ನೆ – ಉತ್ತರ
ಒಂದು ಅಧ್ಯಯನ

ರಾಮಚಂದ್ರ ನರಹರಿವಿಠಲದಾಸರೆಂಬ ಅಂಕಿತದೊಂದಿಗೆ
ನಾಡಿನ ಉದ್ದಗಲಗಳಲ್ಲಿ ಸಂಚರಿಸಿ ಹರಿಸಂಕೀರ್ತನೆ ನಡೆಸಿರುವ
ನಿವೃತ್ತ ರೈಲ್ವೆಗಾರ್ಡ್ ಶ್ರೀ ಎಸ್.ಜಿ. ರಾಮಚಂದ್ರರಾಯರ ಮಾತುಗಳು

## ಸಂಗ್ರಹಿತ ಸಂಪತ್ತಿನ ಸದುಪಯೋಗ

### ಪುರುಷೋತ್ತಮಮಾಸದ ಅಂತರಾರ್ಥದ ಸಂದೇಶ ?

ಹರಿಭಕ್ತ ಸಜ್ಜನರಿಗೆ ಸುಲಭವಾಗಿ ತತ್ವವಿಚಾರಗಳು ತಿಳಿಯಬೇಕೆಂಬುದು ಹರಿದಾಸರ ಸದಿಚ್ಛೆ. ಶ್ರೀಜಗನ್ನಾಥದಾಸರು ಇದಕ್ಕೆ ಅತ್ಯುತ್ತಮನಿದರ್ಶನ.

**ಬಲದೇವ ನೀನೆ ಬೆಂಬಲವಾಗಿ ಇರಲು ದು-**
**ರ್ಬಲ ಕಾಲಕರ್ಮ ಕೆಡಸೋದೆ। ಕೆಡಿಸೋದೆ ನಿನ್ನ ಹಂ**
**ಬಲ ಉಳ್ಳ ಜನರ ಜಗದೊಳು॥** (ತತ್ವಸುವಾಲಿ 20ನೆಯ ಪದ್ಯ)

ಶ್ರೀಜಗನ್ನಾಥದಾಸರ ಮೇಲಿನ ಪದದ ನಿಜ ಅರ್ಥವೆಂದರೆ **ಭವಕಟ್ಟು ಬಿಡಿಸುವ ಪರಮಾತ್ಮ ನಮ್ಮನ್ನು ಎಲ್ಲ ಕಾಲದಲ್ಲಿಯೂ ಕೈಹಿಡಿದು ನಡೆಸುತ್ತಾನೆ.** ಮೂರು ವರ್ಷಕ್ಕೊಮ್ಮೆ ಬರುವ ಅಧಿಕಮಾಸದಂತಹ ಪರ್ವಕಾಲದಲ್ಲಿ ಪುರುಷೋತ್ತಮ ಸ್ವರೂಪಿ ಭಗವಂತನ ನಾಮಸಂಕೀರ್ತನೆಯಿಂದ ಇಹ-ಪರಗಳಲ್ಲಿ ಸಕಲ ಸೌಖ್ಯಸಿಗುತ್ತದೆ ಎಂಬ ಅಂತರಾರ್ಥವಿದೆ.

ಸಂಗ್ರಹಿಸಿಟ್ಟ ಸಂಪತ್ತಿನ ದಾನಕ್ಕೆ ಚಾಲನೆಯನ್ನು ಹರಿಕೊಡುತ್ತಾನೆ. ಪುರುಷೋತ್ತಮಮಾಸದ ಧ್ಯೇಯ-ಉದ್ದೇಶ ಇದು.

ಬುದ್ಧಿ, ಬಲ, ಪರಿಶುದ್ಧ ಭಕ್ತಿ, ಜ್ಞಾನ ಈ ಗುಣಗಳನ್ನು ಗಳಿಸಲು ವ್ರತನಿಯಮಾಚರಣೆಗಳು ಅತ್ಯಂತ ಆವಶ್ಯಕ. **ಶ್ರೀ ಬೃಹನ್ನಾರದೀಯ ಪುರಾಣ ಈ ಮಾತಿಗೆ ಪುಷ್ಟಿಕೊಡುವಂತಹ ನೀತಿ-ನಿರೂಪಣೆಗಳನ್ನು ಬೋಧಿಸಿದೆ. ಶಕ್ಯವಿದ್ದಷ್ಟು ದಾನವನ್ನು ಅನಂತಕಲ್ಯಾಣ ಗುಣನಿಧಿಯಾದ ಪರಮಾತ್ಮನ ಹೆಸರಿನಲ್ಲಿ ಕೊಡಬೇಕೆಂಬುದು ಈ ಮಾಸದ ಮುಖ್ಯ ಉದ್ದೇಶ.**

**ವಿಳಾಸ: ನಂ.252, 'ವಿಜಯಕೃಪ', 6ನೇ ಅಡ್ಡರಸ್ತೆ, ಶ್ರೀನಿವಾಸನಗರ, ಬೆಂಗಳೂರು-560 050**



## ಪುರಾಣ - ಭಾಗವತ - ವಿಷ್ಣುಸರ್ವೋತ್ತಮತ್ವ

**ಶ್ರೀ ಬೃಹನ್ನಾರದಿಯ ಪುರಾಣದಲ್ಲಿ ಪುರುಷೋತ್ತಮಮಾಸದ ಪ್ರಸ್ತಾಪ ಬರುತ್ತದೆ.** ಪರಮಾತ್ಮನನ್ನು ಅರಿಯಲು ಭಕ್ತಿಯೇ ಮುಖ್ಯ ಸಾಧನ ಎನ್ನುವ ನಿರೂಪಣೆಯು ಎಲ್ಲ 18 ಪುರಾಣಗಳ ಮೂಲದ್ರವ್ಯ. ಭಕ್ತನಲ್ಲಿ ಹರಿಸಮರ್ಪಣೆಯ ಭಾವನೆ ಆಳವಾಗಿ ಬೇರೂರುವುದು ಪುರಾಣಗಳಿಂದ.

ಪುರಾಣವಾಙ್ಮಯದ ಹೃದ್ಗತವು ವಿಷ್ಣುಸರ್ವೋತ್ತಮತ್ವದ ಪ್ರತಿಪಾದನೆಯಿಂದ ಪಾವನಗೊಂಡಿದೆ. ಪುರಾಣ ಸಲಕ್ಷಣದಲ್ಲಿ ಸೃಷ್ಟಿ - ಪ್ರತಿಸೃಷ್ಟಿ ವಿಚಾರಗಳು ಕೂಡಿವೆ. **ಜಗತಸೃಷ್ಟಿಕಥನವೇ ಹರಿಕಥೆ.**

ಹರಿದಾಸ ಸಾಹಿತ್ಯದ ಅಂತಃಸ್ತರವಾಹಿನಿಯಾದ ಭಕ್ತಿಭಾವ ವಿಕಾಸಕ್ಕೆ ಭಾಗವತ ಪುರಾಣವೇ ಮೂಲವೆಂದು ಇತಿಹಾಸಕಾರರು ಹೇಳಿದ್ದಾರೆ. ಇತಿಹಾಸಕಾರರ ಮಾತಿನಲ್ಲಿ ಸತ್ಯವಿದೆ.

ಪುರಾಣಗಳಲ್ಲೆಲ್ಲಾ ಭಾಗವತವು ಶ್ರೇಷ್ಠವಾದದ್ದು. ಭಾಗವತದಲ್ಲಿ ಭಕ್ತಿಭಾವ ಪ್ರತಿಪಾದಿತವಾದಂತೆ ಇತರ ಪುರಾಣಗಳಲ್ಲಿ ಕಾಣುವುದಿಲ್ಲ. ಈ ಭಕ್ತಿಯಾದರೋ ವಿಷ್ವೇಕ ನಿಷ್ಠವಾದದ್ದು. **ಶ್ರೀಮದಾನಂದತೀರ್ಥರು ಶ್ರೀಮದ್‌ಭಾಗವತವನ್ನು ಭಕ್ತ್ಯಾ ಭಾಗವತಂ ಶಾಸ್ತ್ರಂ** ಎಂದಿದ್ದಾರೆ. **ಇದಕ್ಕೆ ತಾತ್ಪರ್ಯವನ್ನೂ ರಚಿಸಿದ್ದಾರೆ.**

ವಿಷ್ಣುಭಕ್ತಿ ಸಂಗ್ರಹಕಥೆಯಾದ ಶ್ರೀಮದ್ಭಾಗವತದಿಂದ ಸಾವಿರಾರು ವರುಷಗಳಿಂದ ಋಷಿ, ಮುನಿ, ದಾಸರಾದಿಯಾಗಿ ಮುಮುಕ್ಷುಗಳು ಪ್ರಭಾವಿತರಾಗಿ ಕೃತಿ ರಚಿಸಿರುವ ಅಂಶ ಇತಿಹಾಸದಿಂದ ತಿಳಿಯುತ್ತದೆ. ವೇದಾದಿಗಳಿಂದ ಉದಯವಾದ ಭಕ್ತಿಸಾಹಿತ್ಯ ಪುರಾಣಗಳ ಕಾಲದಲ್ಲಿ ಸರ್ವತ್ರ ಜೀವಂತವಾಗಿತ್ತು. ಅದು ಅವಿಚ್ಛಿನ್ನವಾಗಿ ಅಲ್ಲಿಂದೀಚೆಗೂ ನಡೆದುಬಂದಿದೆ.

**ಗ್ರಂಥ ಋಣ : ವೇದಾಂತರತ್ನಂ, ವಿದ್ಯಾರತ್ನಂ**
**ಡಾ.ಹುಲಿಕೃ. ವೇದವ್ಯಾಸಾಚಾರ್ಯ**
**(1965ರಲ್ಲಿ ಸಿದ್ಧಪಡಿಸಿದ ಕರ್ನಾಟಕದ ಹರಿದಾಸರು ಗ್ರಂಥ ಪುಟ - 156 ರಿಂದ 160**
**ಪ್ರಕಾಶನ : ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,**
**ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ)**

## ಅಧಿಕಮಾಸ ವ್ರತ

ಯಾವ ಚಂದ್ರಮಾಸದಲ್ಲಿ ಒಂದೂ ರವಿಸಂಕ್ರಮಣವು ಸಂಭವಿಸುವುದಿಲ್ಲವೋ ಅಥವಾ ಎರಡು ಸಂಕ್ರಾಂತಿಗಳು ಬರುತ್ತವೆಯೋ ಅಂತಹ ಚಾಂದ್ರಮಾನ ಮಾಸಕ್ಕೆ **ಅಧಿಕಮಾಸ ಅಥವಾ ಮಲಮಾಸ** ಎಂದು ಹೆಸರು. **ಪುರುಷೋತ್ತಮರೂಪೀ ಶ್ರೀಹರಿಯು ಮಾಸಕ್ಕೆ ನಿಯಾಮಕನಾಗಿದ್ದರಿಂದ ಇದು ಪುರುಷೋತ್ತಮಮಾಸ ಆಗಿದೆ.**

**ಅಧಿಕಮಾಸದ ಮುಖ್ಯ ಕರ್ತವ್ಯ -**

**ಅಧಿಕಮಾಸೇ ತು ಸಂಪ್ರಾಪ್ತೇ ಗುಡಸರ್ಪಿರ್ಯುತಾನಿ ಚ ।**
**ತ್ರಯಸ್ತ್ರಿಂಶದಪೂಪಾನಿ ದಾತವ್ಯಾನಿ ದಿನೇ ದಿನೇ ॥**

**ಯಾವಂತಿ ತತ್ರ ಛಿದ್ರಾಣ್ಯಪೂಪಸ್ಯ ಚ ಪಾರ್ಥಿವ ।**
**ತಾವದ್ವರ್ಷಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ॥**

**ಅಧಿಮಾಸೇ ತು ಸಂಪ್ರಾಪ್ತೇ ತ್ರಯಸ್ತ್ರಿಂಶತ್ತು ದೇವತಾಃ ।**
**ಉದ್ದಿಶ್ಯಾಪೂಪದಾನೇನ ಪೃಥ್ವೀದಾನಫಲಂ ಲಭೇತ್ ॥**

**ಮಾಸಾಧಿಕೇ ತು ಸಂಪ್ರಾಪ್ತೇ ಯಾವತ್ಸರ್ವಾನಪೂಪಕಾನ್ ।**
**ತಾವದ್ವರ್ಷಮವಾಪ್ನೋತಿ ವಿಷ್ಣುಲೋಕಂ ಸನಾತನಮ್ ॥**

ಅಧಿಕಮಾಸದಲ್ಲಿ ಪ್ರತಿದಿನ ಬೆಲ್ಲ, ತುಪ್ಪ ಹಾಕಿ ತಯಾರಿಸಿದ ಮೂವತ್ತು - ಮೂರು ಅಪೂಪ ( ಅನಾರಸ ಅಥವಾ ಅತಿರಸ) ಗಳನ್ನು ದಾನಕೊಡಬೇಕು ಎಂದಿದೆ ಶಾಸ್ತ್ರ. ಇದರಿಂದ ಆ ಅಪೂಪದಲ್ಲಿರುವ ಛಿದ್ರಗಳ ಸಂಖ್ಯೆಯಷ್ಟು ವರ್ಷಗಳವರೆಗೆ ಸ್ವರ್ಗಲೋಕವಾಸವು ಪ್ರಾಪ್ತವಾಗುತ್ತದೆ. ಮೂವತ್ತು ಮೂರು ದೇವತೆಗಳನ್ನುದ್ದೇಶಿಸಿ ಕೊಡುವ ಅಪೂಪದಾನವು ಪೃಥ್ವೀದಾನದ ಫಲವನ್ನು ತಂದುಕೊಡುತ್ತದೆ. ಈ ದಾನದಿಂದ ವಿಷ್ಣುಲೋಕವೂ ದೊರೆಯುವುದು. ದಾನಕ್ಕೆ ಶುಕ್ಲ, ಕೃಷ್ಣ ದ್ವಾದಶಿಗಳು, ಪೂರ್ಣಿಮಾ, ಅಮಾವಾಸ್ಯ, ಬಹುಳಾಷ್ಟಮಿ, ನವಮಿ, ಚತುರ್ದಶಿ, ವೈಧೃತಿ, ವ್ಯತೀಪಾತ ದಿನಗಳು ಶ್ರೇಷ್ಠ

**(ಗ್ರಂಥ ಋಣಃ ಸಾಧನ ದೀಪಿಕಾ, ಸಂಪಾದಕ : ಆ.ರಾ. ಪಂಚಮುಖಿ**
**ಪ್ರಕಾಶಕರು : ಶ್ರೀರಾಘವೇಂದ್ರತೀರ್ಥ ಪ್ರತಿಷ್ಠಾನ ಧಾರವಾಡ**
**ಪ್ರಥಮ ಮುದ್ರಣ 1991 ಪುಟ 282-283)**





ಹಿರಿಯ ಶ್ರೀಪಾದಂಗಳವರ ಪೂರ್ವಾಶ್ರಮದ ಪುತ್ರ , ಮುಳಬಾಗಿಲು
ಶ್ರೀ ಶ್ರೀಪಾದರಾಜ ಮಠದ ಪ್ರಧಾನ ನಿರ್ವಾಹಕ ಆದ
ಶ್ರೀ ಜಯರಾಜಾಚಾರ್ಯ ಇವರನ್ನು ಸಂಪರ್ಕಿಸಿದಾಗ

## ಪುರುಷೋತ್ತಮ ಶಬ್ದದ ಅರ್ಥವಿವರಣೆ

**ಸ್ಮೃತಿಗಳಲ್ಲಿ 'ಪುರುಷೋತ್ತಮ ಶಬ್ದದ' ಅರ್ಥವೇನು ?**

ಈ ಪ್ರಶ್ನೆಗೆ ಭಗವದ್ಗೀತೆ ನೇರ ಉತ್ತರವನ್ನು ನೀಡುತ್ತದೆ. **ದ್ವಾ ವಿಮೌ ಪುರುಷೌ ಲೋಕೇ ಕ್ಷರಾಕ್ಷರ ಏವಚ** ಎಂಬ ಶ್ಲೋಕದಲ್ಲಿ ಕ್ಷರ ಮತ್ತು ಅಕ್ಷರ ಎಂಬ ಎರಡು ಪದವಿದೆ. **ಕ್ಷರ ಎಂದರೆ ಶರೀರನಾಶವುಳ್ಳ ಜೀವರಾಶಿಗಳು. ಅಕ್ಷರ ಎಂದರೆ ಶರೀರನಾಶವಿಲ್ಲದ ಲಕ್ಷ್ಮೀದೇವಿ. ಇವರುಗಳಿಗಿಂತ ಉತ್ತಮ ಪುರುಷೋತ್ತಮ.**

**ಶ್ರೀಜಗನ್ನಾಥದಾಸರು ಪುರುಷೋತ್ತಮ ಶಬ್ದಕ್ಕೆ ನೀಡಿದ ಅರ್ಥವೇನು ?**

ವ್ಯಾಪ್ತಿಸಂಧಿಯ ಮೊದಲನೆಯ ಪದ್ಯದಲ್ಲಿ **ಪುರುಷೋತ್ತಮ 'ಕ್ಷರಾಕ್ಷರ ಪೂಜಿತಪಾದ'** ಎಂದಿದ್ದಾರೆ. ಎರಡೂ ವಾಕ್ಯಗಳು ಒಂದೇ ಅರ್ಥವನ್ನು ನೀಡುವುದರಿಂದ ಎರಡು ಸಲ ಹೇಳಿದಂತೆ ಆಗುತ್ತದೆ. ದಾಸರ ಅಭಿಪ್ರಾಯ ಅಧಿಕೋಚ್ಚಾರಣೆ ಆಗುತ್ತದೆ. ಇಪ್ಪತ್ನಾಲ್ಕು ದೇವತೆಗಳನ್ನು ಪುರುಷಶಬ್ದದಿಂದ ಕರೆಯುತ್ತಾರೆ. ಆದಿಯಲ್ಲಿ ಪುರುಷರೂಪಿ ಪರಮಾತ್ಮ ತತ್ವಾಭಿಮಾನಿ ದೇವತೆಗಳಲ್ಲಿ ಇದ್ದು ಬ್ರಹ್ಮಾಂಡವನ್ನು ಸೃಷ್ಟಿಸಿದ ಎನ್ನುವ ಮೂಲ ಅರ್ಥ ಇದರಲ್ಲಿದೆ.

**ಪುರುಷ ಬಹುಶೋ ಶೇತೀತಿ ಪುರುಷ** ಎಂಬ ವಚನದಂತೆ ಪ್ರತಿಯೊಂದು ಶರೀರದಲ್ಲಿ ತತ್ವಾಭಿಮಾನಿಗಳಿರುತ್ತಾರೆ. ಅವರನ್ನು ಪುರುಷರೆಂದು ಕರೆಯುವುದುಂಟು. ಇವರೆಲ್ಲರಲ್ಲಿಯೂ ಪುರುಷರೂಪದಿಂದ ಪರಮಾತ್ಮನಿದ್ದು ಅವರವರ ಕಾರ್ಯಗಳನ್ನು ಮಾಡಿ, ಮಾಡಿಸುತ್ತಾನೆ. ಆದ್ದರಿಂದ **ಇವೆಲ್ಲರಿಗಿಂತಲೂ ಉತ್ತಮನು ಪುರುಷೋತ್ತಮ, ಶ್ರೀಹರಿ ಎಂಬುದು ನಿರ್ಣಯ.**

**ವಿಳಾಸ: ನರಸಿಂಹತೀರ್ಥ, ಮುಳಬಾಗಿಲು, ಕೋಲಾರ-563131**

ಸುಮಾರು ಮೂವತ್ತೈದು ವರ್ಷಕಾಲ ಎಜಿ ಕಛೇರಿಯಲ್ಲಿ
ಸೀನಿಯರ್ ಆಡಿಟರ್ ಹುದ್ದೆಯಲ್ಲಿದ್ದು ನಿವೃತ್ತರಾಗಿ ಅನನ್ಯ ಭಕ್ತಿಯಿಂದ
ಶ್ರೀಹರಿಸೇವೆ ಸಲ್ಲಿಸುತ್ತಿರುವ ಶ್ರೀ ಭಕ್ತರಹಳ್ಳಿ ರಾಘವೇಂದ್ರರಾಯರ ಅನಿಸಿಕೆ.

## ವ್ರತಾಚರಣೆಗೆ ಪುರುಸೊತ್ತು ಎಲ್ಲಿದೆ?

**ಅಧಿಕಮಾಸ ಮತ್ತಿತರ ವ್ರತಾಚರಣೆಗಳ ಬಗೆಗೆ ಇಂದಿನ ಪೀಳಿಗೆಯ ಸಮಾಜದ ಅನಿಸಿಕೆ ಏನು?**

ಇದು ಪ್ರಸ್ತುತ ಎನ್ನುವಂತಹ ಪ್ರಶ್ನೆ. **ರಂಗವಿಠಲ** ಪತ್ರಿಕೆಯ ಪ್ರಾಮಾಣಿಕತೆ ಮತ್ತು ವಾಸ್ತವಿಕ ಪ್ರಜ್ಞೆಯನ್ನು ಅಭಿನಂದಿಸಲೇಬೇಕು. ನೀವು ಕೇಳುತ್ತಿರುವುದು ನಂಬಿಕೆಯ ಪ್ರಶ್ನೆ.

ಈವರೆಗೆ ಬದುಕಿಬಾಳಿದ ಹಿರಿಯರಿಗೂ ಮತ್ತು ಇಂದಿನ ಪೀಳಿಗೆಗೂ ಜ್ಞಾನ, ಭಕ್ತಿ, ತಾರತಮ್ಯ, ಮುಕ್ತಿ, ಸಾಧನ ಇವೇ ಮೊದಲಾದ ತಾತ್ವಿಕ ಚಿಂತನೆಗಳ ಬಗೆಗೆ ವಿಶ್ವಾಸದಲ್ಲಿ ಕೊರತೆ ಕಾಣುತ್ತದೆ. **ಕರ್ಮಾಚರಣೆಗಳಿಗಿಂತಲೂ ಭಕ್ತಿವಿಧೇಯತೆಯ ಮೌಲ್ಯಾಂಕನದ ಪ್ರಶ್ನೆ ಇಲ್ಲಿದೆ.**

ನಿಜ ಹೇಳಬೇಕೆಂದರೆ **ಇಂದಿನ ಪೀಳಿಗೆಯ ಮಕ್ಕಳು ಬಹುತೇಕವಾಗಿ ಸಂಪ್ರದಾಯಸ್ಥ ತಂದೆ-ತಾಯಿಗಳ ವ್ರತ-ನೇಮ- ಉಪವಾಸಾದಿಗಳಿಂದ ದೂರ ಸರಿಯುವ ಘಟ್ಟ ತಲುಪಿದ್ದಾರೆ. ತಂದೆ-ತಾಯಿಗಳ ವ್ರತಾಚರಣೆ ಮಕ್ಕಳಿಗೆ ಅಪ್ರಸ್ತುತ ಎನಿಸಿವೆ. ಭಗವಂತನ ಅವತಾರ ಕಲ್ಪನೆ, ಅನಂತಗುಣಕ್ರಿಯೆ, ಸಂಕರ್ಷಣ, ಹಯಗ್ರೀವ, ಅನಿರುದ್ಧ, ಸನತ್ಕುಮಾರ -ಇವರೇ ಮೊದಲಾದ ಸಚ್ಚಿಂತನೆಗಳ ಬಗೆಗೆ ಗೌರವಭಾವನೆ ಇದ್ದರೂ ಸಂಪ್ರದಾಯ ಚಿಂತನೆ ಮಾಡಲು ಹೆದರುತ್ತಾರೆ. ಜೀವನ ಸಾಗಿಸುವ ಪ್ರಸ್ತುತತೆ ಇಂದಿನ ಮಕ್ಕಳಿಗೆ ಹೆಚ್ಚೆನಿಸುತ್ತದೆ. ಸ್ಪರ್ಧೆಯಿಂದ ಎರಡು ಹೊತ್ತಿನ ಬದುಕು ಸಾಗಬೇಕಾಗಿದೆ. ಆಧ್ಯಾತ್ಮಿಕ ಚಿಂತನೆಗಳಿಗೆ ಪುರುಸೊತ್ತೆಲ್ಲಿ?**

**ಜ್ಞಾನ ಎನ್ನುವುದು ಅವಶ್ಯಕತೆಗಳ ಸಾಧನೆಗಷ್ಟೇ ಸೀಮಿತ ಆಗಿದೆಯೇ?**

ನಮ್ಮ ಮುಂದಿನ ಪೀಳಿಗೆಯ ಮಕ್ಕಳಿಗೆ ಪುರುಸೊತ್ತಿಲ್ಲ. ಶ್ರೀರಂಗೇಶವಿಠಲದಾಸರು ಹೇಳಿದಂತೆ ಇವರಿಗೆ **ಮಾಧವನಾಮವಷ್ಟೇ** ಸಾಕು. **ಮಾಧವನ ನಾಮವು ಮನದೊಳಿದ್ದರೆ ಸಾಲದೇ? ಸ್ನಾನ, ಸಂಧ್ಯಾವಂದನ, ಧ್ಯಾನ, ನೇಮ ಆನುಪೂರ್ವಿಕ ಕರ್ಮಗಳಿಗೆ ಎಡೆ ಎಲ್ಲಿ? ಶ್ರೀನಿವಾಸನ ನಾಮಸ್ಮರಣೆಯಷ್ಟೇ ಸಾಕು.**

ನಮ್ಮ ಮಕ್ಕಳು ಈ ಹಂತ ತಲುಪುತ್ತಿದ್ದಾರೆ.

**ವಿಳಾಸ: ನಂ.1249, 2ನೇ ಹಂತ, 10ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-560086**





## ನಿಮಗಾಗಿ ಹೊಸತನದ ಚರ್ಚೆ - ವಿನ್ಯಾಸ

ಮುಂದಿನ ಪುಟಗಳಲ್ಲಿ **ರಂಗವಿಠಲ** ಪತ್ರಿಕೆ ವಿನೂತನ ರೀತಿಯಲ್ಲಿ ಮಾಸಾಚರಣೆ ಕುರಿತ ಧಾರ್ಮಿಕ ವಿಷಯ ನಿರೂಪಿಸಲಿರುವುದನ್ನು ಕಾಣಲಿದ್ದೀರಿ. ವಿಷಯ ಪ್ರತಿಪಾದನೆ ಮತ್ತು ವಿನ್ಯಾಸದಲ್ಲಿ ಇದೊಂದು ಹೊಸತನ. **ಇಡೀ ಪತ್ರಿಕೆಯನ್ನು ಪ್ರಶ್ನೆ-ಉತ್ತರ ರೂಪದಲ್ಲಿ ಹೊರತರುವ ಪ್ರಯತ್ನ ಮುಂದಿನ ಪುಟಗಳಲ್ಲಿದೆ.**

**ಅಧಿಕಮಾಸ - ಚರ್ಚೆಯ ವಿಷಯ :**

**''ದುರ್ಭಿಕ್ಷದಲ್ಲಿ ಅಧಿಕಮಾಸ''** ಎನ್ನುವ ಗಾದೆ ಮಾತೊಂದಿದೆ. ಮೊದಲಬಾರಿಗೆ **ಧಾರ್ಮಿಕ ಅನುಸಂಧಾನದಲ್ಲಿ ಈ ಗಾದೆ ಪಲಾಯನದ ಹಾದಿ ಎಂಬ ಅಂಶ ಮನದಟ್ಟು ಮಾಡುವ ಪ್ರಯತ್ನ** ಮುಂದಿನಪುಟಗಳಲ್ಲಿದೆ.

ಎರಡನೆಯ ಅಂಶವೆಂದರೆ ದಾನ, ಧರ್ಮ, ವ್ರತ, ನಿಯಮಗಳನ್ನು ಆಯಾಕಾಲಕ್ಕೆ ತಕ್ಕಂತೆ ಆಚರಿಸುವ ಉದಾರ ರೀತಿ – ನೀತಿಯನ್ನು ನಾವು ಬೆಳಸಿಕೊಳ್ಳಬಹುದು. ಭಕ್ತನ ಪ್ರಯತ್ನದಿಂದ ಇದು ಸಾಧ್ಯ. **ಉದಾಹರಣೆಗೆ ಅಧಿಕಮಾಸವನ್ನು ಅಪೂಪದಿಂದಲೇ ಆಚರಿಸುವ ಕಡ್ಡಾಯವನ್ನು ಬದಲಾಯಿಸಬಹುದು. ಉತ್ತಮಗ್ರಂಥಗಳನ್ನು ದಾನಮಾಡಿ ಪುರುಷೋತ್ತಮಮಾಸವನ್ನು ಜ್ಞಾನಕಾರ್ಯಕ್ಕೆ ಮೀಸಲಾದ ಕಾಲವನ್ನಾಗಿ ಆಚರಿಸಬಹುದು.**

ನಾಡಿನ ಹಲವಾರು ಹಿರಿಯರು, ಪಂಡಿತರು, ಜ್ಞಾನಿಗಳು ಗೃಹಿಣಿಯರು, ಸಮಾಜ ಸೇವಾಕಾರ್ಯಕರ್ತರು ಹೀಗೆ **ರಂಗವಿಠಲ** ಪತ್ರಿಕೆಯ ಅಭಿಮಾನಿ – ಹಿತೈಷಿಗಳು ಪ್ರಶ್ನೆ – ಉತ್ತರದಲ್ಲಿ ಪಾಲ್ಗೊಂಡಿದ್ದಾರೆ. ಯುವಜನರು ಮತ್ತು ಮುಂದಿನ ಪೀಳಿಗೆಯ ಓದುಗರಿಗೆ ಪತ್ರಿಕೆಯ ಹೊಸತನ ಹಿಡಿಸಿದರೆ ನಮ್ಮ ಉದ್ದೇಶ ಸಫಲವಾದಂತೆ.

**ಹೆಚ್.ಬಿ. ಲಕ್ಷ್ಮೀನಾರಾಯಣಾಚಾರ್ಯ**
**ಎಸ್.ಕೆ. ಶೇಷಚಂದ್ರಿಕ**

ಸಮಕಾಲೀನ ಜ್ಞಾನಾರ್ಜನೆಯ ಜಗತ್ತಿನ ಆದರ್ಶಪೂರ್ಣ ಪ್ರಾಚಾರ್ಯ ಮತ್ತು ಮಾಜಿ ಉಪಕುಲಪತಿ **ಶ್ರೀ ಡಿ. ಪ್ರಹ್ಲಾದಾಚಾರ್ಯ**ರನ್ನು ದೆಹಲಿಯಲ್ಲಿ ಸಂಪರ್ಕಿಸಿ ನಡೆಸಿದ ಸಂದರ್ಶನ

# ಔದಾರ್ಯದ ಒಡಲು ಅಧಿಕಮಾಸ

**ಪುರುಷೋತ್ತಮ ಮಾಸಾಚರಣೆಯ ಯಾವುದಾದರೊಂದು ಅಪರೂಪದ ಸಂದರ್ಭ ನೆನಪುಮಾಡಿ ತಿಳಿಸಿ ?**

ಗುರುಮನೆಯಲ್ಲಾಗಲೀ, ಅರಮನೆಯಲ್ಲಾಗಲೀ ಪರಮಾತ್ಮನ ಭಕ್ತರನ್ನು ಅಂತಃ-ಕರಣದಿಂದ ಆದರಿಸುವುದು ಅಧಿಕಮಾಸದ ಮುಖ್ಯ ಉದ್ದೇಶ. ಅಪೂಪ ಮತ್ತಿತರ ವಸ್ತುಗಳೆಲ್ಲ ಒಂದು ಸಾಧನ ಕ್ರಮ ಅಷ್ಟೆ

ಬಾಲ್ಯದಲ್ಲಿ ನಾನು ಈ ಮಹತ್ವಪೂರ್ಣ ಆಚರಣೆಯನ್ನು **ಶ್ರೀ ವ್ಯಾಸರಾಜ ಸಂಸ್ಥಾನಾಧೀಶ ಶ್ರೀ ಶ್ರೀ ವಿದ್ಯಾಪ್ರಸನ್ನತೀರ್ಥರಲ್ಲಿ ಕಂಡಿದ್ದೆ.** ಇದೇ ಮನೋಧರ್ಮ ನಂತರ ಮಠಾಧೀಶರಾದ **ಶ್ರೀ ಶ್ರೀ ವಿದ್ಯಾಪಯೋನಿಧಿತೀರ್ಥರಲ್ಲಿಯೂ** ನೆಲೆಮೂಡಿತ್ತು. ಸ್ವತಃ ಕೃತಿರಚನೆಕಾರರೂ, ಹರಿದಾಸರೂ ಆದ **ಶ್ರೀ ಶ್ರೀ ವಿದ್ಯಾಪ್ರಸನ್ನತೀರ್ಥರು** ಪುರುಷೋತ್ತಮಮಾಸದಲ್ಲಿ ತಾವೇ ಮುಂದೆ ನಿಂತು ಸದ್ಗೃಹಸ್ಥ ಶಿಷ್ಯರುಗಳಿಂದ ಹರಿದಾಸರುಗಳಿಗೆ ದಾನಧರ್ಮಗಳನ್ನು ಮಾಡಿಸುತ್ತಿದ್ದ ದೃಶ್ಯ ಕಣ್ಣಿಗೆ ಕಟ್ಟಿದಂತಿದೆ.

**ಇಂದು ನಿಮ್ಮ ಸಂದೇಶವೇನು?**

ತ್ಯಾಗ, ದಾನ, ಧರ್ಮ, ಸಹಾಯ ಹಸ್ತ – ಇವು ಜೀವನಪರ್ಯಂತ ನಡೆಸಲೇಬೇಕಾದ ನಿತ್ಯಕರ್ತವ್ಯ. ಸಮಾಜದಿಂದ ನಾವು ಇದನ್ನು ಪಡೆದಿದ್ದೇವೆ. ಸಮಾಜಕ್ಕೆ ನಾವು ಇದನ್ನು ಹಿಂತಿರುಗಿಸಬೇಕು.

**ಶ್ರೀ ಹರಿಕಥಾಮೃತಸಾರವನ್ನು** ವಿಶ್ವಸಮುದಾಯಕ್ಕೆ ಕೊಟ್ಟ ದಾರ್ಶನಿಕ ಹರಿದಾಸರು **ಶ್ರೀ ಜಗನ್ನಾಥದಾಸರು** ಹೇಳಿರುವ ಸರ್ವಕಾಲಿಕ ಸಂದೇಶ ಇದು. **ಹರಿಸೇವೆಯಲ್ಲಿಯೂ ಔದಾರ್ಯವಿರಲಿ ಎಂದಿದ್ದಾರೆ. ನಾವು ಕೊಡುವ ದಾನ ಸಂಪತ್ತುಗಳನ್ನು ಶ್ರೀಹರಿ ಮರಳಿ ಸತ್ಪಾತ್ರರಿಗೆ ನೂರುಪಟ್ಟು ಹಿಂತಿರುಗಿಸುತ್ತಾನೆ. ಇದು ದಾಸರ ಖಚಿತ ನಂಬಿಕೆ.**

ಔದಾರ್ಯದ ಒಡಲು ಪುರುಷೋತ್ತಮಮಾಸ.

**ವಿಳಾಸ: ನಂ. 120/2, 15ನೇ ಅಡ್ಡರಸ್ತೆ, ಗಂಗಮ್ಮ ಲೇಔಟ್, ಬೆಂಗಳೂರು-560050**





ಖ್ಯಾತ ನ್ಯಾಯವಾದಿ ದಂಪತಿಗಳೂ, ದಾಸಸಾಹಿತ್ಯ ಅಭ್ಯಾಸಿಗಳೂ, ಆಸ್ತಿಕ ಸಮಾಜಸೇವಕರೂ ಆದ **ಸೌ|| ರೇಖಾ ಪ್ರಸಾದ** ಮತ್ತು **ಶ್ರೀ ಡಿ.ಎಲ್. ಪ್ರಸಾದ** ದಂಪತಿಗಳನ್ನು ಚಿಂತಾಮಣಿಯಲ್ಲಿ ಸಂದರ್ಶಿಸಿದಾಗ

# 33 ಹಾಡುಗಳನ್ನು ಬದರಿನಾಥನಿಗೆ ಅರ್ಪಿಸುವ ಯೋಜನೆ

**ಕಾಲ ಬದಲಾಗುತ್ತಿದೆ. ಇಂತಹ ದಿನಗಳಲ್ಲಿ ಸಂಪ್ರದಾಯ, ವ್ರತ, ಹಬ್ಬಹರಿದಿನಗಳನ್ನು ಹೇಗೆ ಆಚರಿಸುತ್ತೀರಿ?**

ವ್ಯಾಪಾರ – ಉದ್ದಿಮೆಗಳಲ್ಲಿ ದಿನನಿತ್ಯದ ಬದುಕನ್ನು ಸಾಗಿಸುತ್ತಿರುವ ಪಟ್ಟಣವಾಸಿಗರು ನಾವು. ಕೋಲಾರ ಜಿಲ್ಲೆಯ ಚಿಂತಾಮಣಿ ನಮ್ಮ ಸ್ಥಳ. ಇಂತಹ ಪರಿಸರದಲ್ಲಿ ಧಾರ್ಮಿಕ ಶ್ರದ್ಧೆಯನ್ನು ಕಾಪಾಡಿಕೊಳ್ಳುವುದು ಹೇಗೆ? ಈ ಪ್ರಶ್ನೆ ಎದುರಾದಾಗ **ನಮಗೆ ದಾಸಸಾಹಿತ್ಯ ಮತ್ತು ಸಾಂಪ್ರದಾಯಿಕ ವ್ರತ – ಆಚರಣೆಗಳು ಸಮಾಧಾನ ನೀಡಿದವು. ಅಧಿಕಮಾಸದ ಆಚರಣೆಯೂ ಇಂತಹ ಒಂದು ಉತ್ತರವಾಯಿತು.**

ಮನಸ್ಸನ್ನು ಶ್ರದ್ಧೆ, ಭಕ್ತಿ, ವ್ಯಾಕುಲತೆ ಮತ್ತು ಶಿಸ್ತಿನಿಂದ ಕಾಪಾಡಿಕೊಳ್ಳಲು ಸಂಪ್ರದಾಯಬದ್ಧತೆಯಿಂದ ಸಾಧ್ಯ ಎಂಬುದನ್ನು ಅನುಭವದಿಂದ ಕಂಡುಕೊಂಡಿದ್ದೇವೆ. **ಶ್ರೀರಾಘವೇಂದ್ರ ಭಜನಾ ಮಂಡಲಿ** ಮತ್ತು **ಆಚಾರ್ಯರಕಟ್ಟೆ ಸತ್ಯಸಂಧ ಭಜನಾಮಂಡಲಿಗಳ** ಸದಸ್ಯೆಯರಾದ ನಾವು ಕಲೆತು ಅಧಿಕಮಾಸ ಆಚರಣೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ.

**ಈ ಎಲ್ಲ ಕಾರ್ಯಗಳಿಗೆ ನಿಮಗೆ ಸ್ಫೂರ್ತಿ ನೀಡಿದ ಸಂದರ್ಭ ಯಾವುದು?**

ನಾವು ಸುಮಾರು 16 ಮಂದಿ ಸಜ್ಜನರು 2007ರಲ್ಲಿ ಅಧಿಕಮಾಸದ ಅವಧಿಯಲ್ಲಿ ಬದರಿಯಾತ್ರೆ ಕೈಗೊಂಡಿದ್ದೆವು. ಇದು ಸ್ಫೂರ್ತಿನೀಡಿದ ಸಂದರ್ಭ. **ಫಲಿಮಾರು ಮಠಾಧೀಶ ಶ್ರೀ ಶ್ರೀವಿದ್ಯೇಶತೀರ್ಥ ಶ್ರೀಪಾದರು ಶ್ರೀಬಾಳಗಾರು ಶ್ರೀನಿವಾಸಾಚಾರ್ಯರು, ಶ್ರೀರಾಮವಿಠಲಾಚಾರ್ಯರು ಇವರೇ ಮೊದಲಾದವರು ನಮಗೆ ವ್ರತಾಚರಣೆಗೆ ಮಾರ್ಗದರ್ಶನ ನೀಡಿದ್ದಾರೆ.**

**ಮುಂದೇನು ಮಾಡಬೇಕೆಂದಿದ್ದೀರಿ?**

ಹರಿದಾಸರ 33 ಹಾಡುಗಳನ್ನು ಸಂಗ್ರಹಿಸಿ, ಅರ್ಥಪೂರ್ಣವಾಗಿ ಭಾವತುಂಬಿ, ಪ್ರಾಂಜಲ ಮನಸ್ಸಿನಿಂದ ಹಾಡಿ, **ಶ್ರೀಬದರಿಕ್ಷೇತ್ರದಲ್ಲಿ ಪರಮಾತ್ಮನಿಗೆ ಒಪ್ಪಿಸಬೇಕೆಂದಿದ್ದೇವೆ.** ನಂತರ ಇದನ್ನು CD ಮಾಡಿ ಹಂಚಲಿದ್ದೇವೆ.

**ವಿಳಾಸ : 3381, ದೀಪಶ್ರೀ 13ನೇ ಕ್ರಾಸ್, 2ನೇ ಮೈನ್, ಶಾಸ್ತ್ರಿನಗರ, ಬೆಂಗಳೂರು-560028**

ರಂಗವಿಠಲ ಪತ್ರಿಕೆಗೆ ನಿರಂತರ ಶ್ರದ್ಧೆ–ಆಸಕ್ತಿಯಿಂದ ಲೇಖನ– ಅಧ್ಯಯನ ಸಿದ್ಧಪಡಿಸುತ್ತ ಬಂದಿರುವ ಧಾರವಾಡದ ಖ್ಯಾತ ಲೇಖಕಿ **ಡಾ|| ಆರ್. ಲಕ್ಷ್ಮಿ** ಇವರ ಅನಿಸಿಕೆಗಳು

# ಪುರುಷೋತ್ತಮನ ಪ್ರೀತಿಗಳಿಸೋಣ

### ಪುರುಷೋತ್ತಮಮಾಸದ ಪ್ರಸ್ತಾಪ ಎಲ್ಲಿ ಬರುತ್ತದೆ?

ಶ್ರೀ ಬೃಹನ್ನಾರದೀಯ ಪುರಾಣದ ಏಳನೇ ಅಧ್ಯಾಯದಲ್ಲಿ ಅಧಿಕ ಮಾಸದ ಮಹಾತ್ಮೆ ಪ್ರಸ್ತಾಪಿತವಾಗಿದೆ.

ಪರಮಪುರುಷ ಹರಿ ಸರ್ವೋತ್ತಮನು ಸ್ವತಃ ನಿಯಾಮಕ – ಎಂದ ಬಳಿಕ ಅಧಿಕಮಾಸವು ಜೀವಿಗಳನ್ನು ಉನ್ನತ ಜೀವನದತ್ತ ಕೊಂಡೊಯ್ಯುವ ಸಾಧನ ಪರಿಶ್ರಮ ಆಗಬೇಕು. ಇಷ್ಟದೈವದ ಅನುಗ್ರಹ ಬೇಕೆನಿಸಿದವರಿಗೆ ಅಧಿಕಮಾಸ ದಾನ, ಧರ್ಮ, ವ್ರತ ನಿಯಮಗಳ ಅನುಸಂಧಾನ ಕಾಲ. ದುಃಖ ದಾರಿದ್ರ್ಯ ನಾಶವಾಗುವ ಪ್ರೌಢವ್ರತದ ಅವಧಿ ಅಧಿಕಮಾಸ.

### ಅಧಿಕಮಾಸದಲ್ಲಿ ಏನು ಮಾಡಬಹುದು ?

**ಕಾಲಿಗೆ ಗೆಜ್ಜೆ ಕಟ್ಟಿ , ತಂಬೂರಿ, ಚಿಟಿಗೆಗಳೊಂದಿಗೆ ಹರಿ ಸೇವೆ ಮಾಡುತ್ತ ಬರುತ್ತಿದ್ದ ಹರಿದಾಸರ ಕಾಲ ಈಗಿಲ್ಲ, ಹೀಗೆಂದು ಚಿಂತಿಸುತ್ತಾ ಕೂಡುವ ಕಾಲವೂ ಇದಲ್ಲ, ಪ್ರತಿ ಮೂರು ವರ್ಷಕ್ಕೊಮ್ಮೆ ಬರುವ ಪುರುಷೋತ್ತಮ ಮಾಸದಲ್ಲಿ ವ್ಯರ್ಥವಾಗಿ ಕಾಲಕಳೆಯದಿದ್ದರೆ ಇದೇ ನಿಜಕ್ಕೂ ಹರಿಸೇವೆ.** ಭಕ್ತ ಬಡವನಾಗಿರಬಹುದು, ಇಲ್ಲವೇ ಬಲ್ಲಿದನಾಗಿರಬಹುದು. ಶ್ರದ್ಧೆಯಿಂದ ಪೂಜೆ, ದಾನ, ಧರ್ಮ, ಶ್ರವಣ, ಮನನ ಮಾಡುವ ಮೂಲಕ ಭಗವಂತನಲ್ಲಿ ಶರಣಾಗಲು ಎಲ್ಲ ಮಾಸಗಳಲ್ಲಿಯೂ ಅವಕಾಶವಿದೆ. **ಇದೇ ಸಾಧನ ಮಾರ್ಗ.**

### ಅಧಿಕಮಾಸದ ಸಂದೇಶವೇನು?

ಪುರುಷೋತ್ತಮನು ತಾನೇ ಈ ಮಾಸಕ್ಕೆ ಅಧಿಪತಿಯೆಂದು ಆದೇಶವಿತ್ತ ಮಾಸವಿದು. ಸದ್ವಿಚಾರ ಮತ್ತು ಸದಾಚಾರಗಳಿಂದ ಬದುಕುವ ಪ್ರಯತ್ನ ಈ ಮಾಸದಲ್ಲಿ ನಡೆಯುವಂತಾಗಬೇಕು. ಭಾಗವತಧರ್ಮದ ಪ್ರಚಾರ ಪ್ರತಿಯೋರ್ವರಿಂದಲೂ ನಡೆಯಬೇಕು. ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರ ಮನೆ ಮನವನ್ನು ಬೆಳಗಬೇಕು. ಇದು ಅಧಿಕಮಾಸದ ಸಂದೇಶ.

**ವಿಳಾಸ: ಸಂಸ್ಕೃತ ಉಪನ್ಯಾಸಕಿ, ಮಹಿಳಾ ವಿದ್ಯಾಲಯ, ಧಾರವಾಡ-580 008**





ವಿದ್ಯಾವಾಚಸ್ಪತಿ, ದರ್ಶನರತ್ನ, ಸಶ್ಶಾಸ್ತ್ರ ವಿಚಕ್ಷಣ, ಮಧ್ವಮತ ವರ್ಧನ, ಪ್ರವಚನ ಆಚಾರ್ಯ, ವೇದವಿದ್ಯಾ ವಿಚಕ್ಷಣ, ವಿದ್ಯಾನಿಧಿ, ಜ್ಞಾನರತ್ನಾಕರ, **ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ** ಇವರೊಂದಿಗೆ ಸಂದರ್ಶನ

# ಭಾಗವತ ಶ್ರವಣಕ್ಕೆ ಉತ್ತಮ ಮಾಸ

### ಅಧಿಕಮಾಸದ ವಿಷಯವಾಗಿ ಪುರಾಣಗಳಲ್ಲಿ ಉಲ್ಲೇಖಗಳಿವೆಯೇ?

**ವಿಸ್ತಾರವಾದ ನಿರೂಪಣೆಯನ್ನು ಬೃಹನ್ನಾರದೀಯ ಪುರಾಣದಲ್ಲಿ, ಪದ್ಮ ಪುರಾಣದಲ್ಲಿ ಹಾಗೂ ವರಾಹಪುರಾಣದ ಚಾತುರ್ಮಾಸ ಭಾಗದಲ್ಲಿ ಕಾಣಬಹುದು. ಸಂಕ್ಷೇಪವಾಗಿ ಎಲ್ಲ ಪುರಾಣಗಳಲ್ಲೂ ಅಧಿಕಮಾಸದ ವಿಶೇಷತೆ ಕಂಡುಬರುತ್ತದೆ.**

### ಎಲ್ಲ ಪುರಾಣಗಳಲ್ಲೂ ಒಂದೇ ವಿಷಯವೇ ಅಥವಾ ಬೇರೆ ಬೇರೆಯೇ?

ಅಧಿಕಮಾಸ ಮಲಮಾಸದ ವಿಶೇಷತೆ ಮತ್ತು ದಾನಧರ್ಮಗಳ ನಿರೂಪಣೆಯು ಎಲ್ಲಾ ಪುರಾಣಗಳಲ್ಲೂ ಒಂದೇ ಆಗಿವೆ. ಕಥೆಗಳ ಭಾಗದಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕಾಣಬಹುದು.

### ಸೌರಮಾನಕ್ಕೂ ಚಾಂದ್ರಮಾನಕ್ಕೂ ಇರುವ ವ್ಯತ್ಯಾಸವೇನು ?

ಚಾಂದ್ರಮಾನದಲ್ಲಿ ಪ್ರತಿವರ್ಷವೂ 10 ದಿನಗಳು ಕಡಿಮೆಯಾಗುತ್ತವೆ. ಸೌರಮಾನದಲ್ಲಿ ಹೆಚ್ಚು ಕಡಿಮೆ ಇರುವುದಿಲ್ಲ. ಈ ವ್ಯತ್ಯಾಸವನ್ನು ಸಮತೋಲನ ಮಾಡಲು ಅಧಿಕಮಾಸವು ಉಪಕಾರಿಯಾಗಿರುತ್ತದೆ.

### ಅಧಿಕಮಾಸದ ವಿಶೇಷತೆಯೇನು ?

ದಾನಧರ್ಮಾದಿಗಳನ್ನು ಮಾಡುವುದರಿಂದ 16 ಪಾಲು ಉತ್ತಮ ಫಲಸಿಗುವುದು. ಶ್ರೀಪುರುಷೋತ್ತಮನ ಧ್ಯಾನವನ್ನು ಸದಾಮಾಡಬೇಕು. **ಭಾಗವತ ಶ್ರವಣವು ಉತ್ತಮೋತ್ತಮವು.** ಉಪವಾಸ ವ್ರತಗಳು ಸಂಕಲ್ಪಮಾತ್ರೇಣ ಪುಣ್ಯಪ್ರದವು.

**ವಿಳಾಸ: ನಂ.67,ವ್ಯಾಸ-ಮಧ್ವಸಂಶೋಧನ ಪ್ರತಿಷ್ಠಾನ, ಹನುಮಂತನಗರ, ಬೆಂಗಳೂರು-560 019**

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನನಿಲ್ದಾಣದ ಸೇವಾಕಾರ್ಯದಲ್ಲಿ ತೊಡಗಿರುವ ಹವ್ಯಾಸಿ ಲೇಖಕ **ಶ್ರೀರಾಘವೇಂದ್ರ ಅಡಬಡ್ಡಿ**ಯವರನ್ನು ಫೋನಿನಲ್ಲಿ ಸಂಪರ್ಕಿಸಿ ಮಾತನಾಡಿಸಿದಾಗ

# ಶ್ರೀ ಹಯವದನ ವಿಠಲರ ಕೃತಿ

**ಅಪೂಪದಾನದ ಮಹತ್ವ ತಿಳಿಸುವ ಯಾವುದಾದರೊಂದು ಪದ್ಯ ತಿಳಿಸಿ?**

ದಾಸಸಾಹಿತ್ಯ ಸಂಶೋಧಕರೂ, ಶ್ರೀಹಯವದನ ವಿಠಲಾಂಕಿತ ಹರಿದಾಸರೂ ಆದ ವಿಜಾಪುರದ ಶ್ರೀನಿವಾಸ ಸು. ಮಠದರವರು ಅಧಿಕಮಾಸವ್ರತ ಕುರಿತಂತೆ ರಚಿಸಿದ ಪದ್ಯ ಹೀಗಿದೆ:

**ಅಧಿಕಮಾಸದ ಅಧಿಪತಿ ಪುರುಷೋತ್ತಮನ**
**ಅಧಿಕವಾಗಿ ಭಜಿಸಿ ಸುಖಿಯಾಗಿರಿ ॥ ಪ॥**

**ಯಾವ ಮಾಸದಿ ಸೂರ್ಯಸಂಕ್ರಾತಿ ಇಲ್ಲವೋ ಅ**
**ದುವೆ ಮಾಸವು ಅಧಿಕವೆಂದು ಕರೆಸುವುದು ॥ 1॥**

**ಅಧಿಕಮಾಸದ ನೂತನ ಕಾರ್ಯ ವರ್ಜಿಸುವದು ಆ**
**ಅಧಿಕದಿ ಮೂವತ್ಮೂರು ಅಪೂಪದಾನ ಕೊಡುವದು ॥ 2॥**

**ಅಪೂಪದಾನ ಕೊಡುವಾಗ ಮೂವತ್ಮೂರು ಭಗವದ**
**ರೂಪಗಳ ಚಿಂತಿಸಿ ದಾನಕೊಡಲು ಸಂಪತ್ ಸಮೃದ್ಧಿಯು ॥ 3॥**

**ಅಪೂಪಗಳಲಿ ಛಿದ್ರಗಳಿರುವಷ್ಟು ಕಾಲ ಸ್ವರ್ಗಪ್ರಾಪ್ತಿ**
**ಅಪೂಪದಾನದಿ ಜ್ಞಾನದ್ವಾರಾ ಕೊನೆಗೆ ಮೋಕ್ಷಪ್ರಾಪ್ತಿ ॥ 4॥**

**ಪುರುಷೋತ್ತಮ ಶ್ರೀಹಯವದನ ವಿಠ್ಠಲನ ಮೂವತ್ತು**
**ಮೂರು ರೂಪಗಳ ನಿತ್ಯ ಭಜಿಸಿ ಅಧಿಕ ಸುಖಿಯಾಗಿರಿ॥ 5॥**

ಅಪೂಪದಾನದಿಂದ ಜ್ಞಾನದ್ವಾರ ಮೋಕ್ಷಪ್ರಾಪ್ತಿಯುಂಟು. ಇಂತಹ ಅಪರೂಪದ ಅಧಿಕಮಾಸವನ್ನು ಸಂಭ್ರಮ, ಸಡಗರ, ಶ್ರದ್ಧಾಭಕ್ತಿಯಿಂದ ಆಚರಿಸೋಣ.

**ವಿಳಾಸ : 731, 13ನೇ 'ಬಿ'ಮುಖ್ಯರಸ್ತೆ 13ನೇ ಅಡ್ಡರಸ್ತೆ ಯಲಹಂಕ ಬೆಂಗಳೂರು-560064.**





Constitutional Law ವಿಷಯದಲ್ಲಿ ತಜ್ಞರಾಗಿರುವ ಮತ್ತು ಸಿಂಗಪುರದ ನಿವಾಸಿ ನ್ಯಾಯವಾದಿ **ಶ್ರೀ ಜಿ.ಆರ್. ರಘುನಾಥರಾಯ**ರು Email ಮೂಲಕ ಕಳುಹಿಸಿರುವ ಪ್ರಶ್ನೋತ್ತರ

# ಶ್ರದ್ಧೆ-ಔದಾರ್ಯ ಬೆಳೆಸಿಕೊಳ್ಳಿ

**ಅಧಿಕಮಾಸದ ಕೆಲವು ಸಾಮಾನ್ಯ ಕಟ್ಟುಪಾಡುಗಳನ್ನು ತಿಳಿಸಿ?**

ಮಾಸಾಚರಣೆಯು ಭಕ್ತರುವಾಸಿಸುವ ಪರಿಸರ ಮತ್ತು ಸ್ಥಿತಿಗತಿ ಮೇಲೆ ನಿರ್ಣಾಯಕವಾಗುತ್ತದೆ. ರೂಢಿಯಲ್ಲಿ ಎಲ್ಲರಿಗೂ ಸಾಮಾನ್ಯವಾಗಿ ಅನ್ವಯಿಸುವಂತೆ ಕಂಡರೂ ಆಯಾ ಭೂಪ್ರದೇಶದ ರಚನೆ ಮತ್ತು ಅನುಕೂಲ-ಅನಾನುಕೂಲಗಳಿಗೆ ಅವಲಂಬಿಸಿದಂತೆ ವ್ರತಗಳ ಆಚರಣೆ ನಡೆಯಬೇಕಾಗುತ್ತದೆ.

ಉದಾಹರಣೆಗೆ ನದಿ ಸ್ನಾನಬೇಕು. ಆದರೆ ಇದು ಕೆಲವರಿಗೆ ಮಾತ್ರಸಿಗುವ ಸೌಲಭ್ಯ. ಇಷ್ಟಾದರೂ **ಅಧಿಕಮಾಸ ಅವಧಿಯಲ್ಲಿ ಒಮ್ಮೆಯಾದರೂ ನದಿಯಲ್ಲಿ ಪುಣ್ಯಸ್ನಾನ ಮಾಡಿಬರುವ ಮನಸ್ಸು ಬರಬೇಕು.**

**ಇದನ್ನು ಸತ್ಯನುಡಿಯಮಾಸ ಎನ್ನುತ್ತಾರೆ? ಇದರ ಅರ್ಥ?**

ಮನಸ್ಸಿನ ಮೇಲೆ ಹಿಡಿತ ಸಾಧಿಸುವ ಎಚ್ಚರ ಹರಿಭಕ್ತನಲ್ಲಿರಬೇಕು. ನಮ್ಮ ಭಾಷೆ ಶುದ್ಧವಿರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಪುರುಷೋತ್ತಮನಾಮಕನ ಸ್ಮರಣೆಯ ಮಾಸವಾದಕಾರಣ **ಸತ್ಯವನ್ನು ನುಡಿಯುವ ಎಚ್ಚರಿಕೆ ಹರಿಭಕ್ತನಮನದಲ್ಲಿ ಜಾಗ್ರತವಾಗಬೇಕು.** ಹರಿದಾಸರ ಕೃತಿಗಳನ್ನು ಬಾಯಿಪಾಠ ಮಾಡಿಕೊಳ್ಳುವ ವಿವೇಕ ಹೆಚ್ಚಿದಂತೆಲ್ಲಾ ಅವಾಚ್ಯ ಉಚ್ಚರಣೆ ನಿಲ್ಲುತ್ತದೆ.

**ಧ್ಯಾನಕ್ಕೆ ಈ ಮಾಸ ವಿಶೇಷವಲ್ಲವೇ?**

ವ್ರತದ ಮೂಲಉದ್ದೇಶ ವ್ಯಕ್ತಿಯ ಚಿಂತನಾಶುದ್ಧಿ. ಹರಿನಾಮಸ್ಮರಣೆಗೆ ತೊಡಗುವ ವ್ಯಕ್ತಿಯಲ್ಲಿ ಸಹಜವಾಗಿ ಶಿಸ್ತು-ಸಂಯಮ ಇರಬೇಕು.

**ಮುಖ್ಯವಾಗಿ ಪುರುಷೋತ್ತಮಮಾಸವು ಭಕ್ತನಿಗೆ ದಾನ-ತ್ಯಾಗದ ಮಹತ್ವವನ್ನು ತಿಳಿಸುವ ಕಾಲ. ತಾನು ಗಳಿಸಿದುದನ್ನು ಹರಿಭಕ್ತರಿಗೆ ಕೊಡುವ ದೊಡ್ಡ ಮನಸ್ಸು (ಮೂರುವರ್ಷಕ್ಕೆ ಒಮ್ಮೆ ಬರುವ ಈ ಮಾಸದಲ್ಲಿ ಭಕ್ತನ ದಿನನಿತ್ಯ ವ್ಯವಹಾರಗಳಲ್ಲಿ) ಎದ್ದುಕಾಣುವಂತಾಗಬೇಕು.**

**ವಿಳಾಸ ನಂ. 1003, ಗರ್ಗೇಶ್ವರಿ , ಜಯನಗರ 9ನೇ ಬ್ಲಾಕ್,ಬೆಂಗಳೂರು-560 069.**

ಮಾನ್ವಿ ಪುಣ್ಯಕ್ಷೇತ್ರದಲ್ಲಿ ಸುಳಾದಿ ಪ್ರಚಾರ ಕೇಂದ್ರದ ಮೂಲಕ ದಾಸಸಾಹಿತ್ಯ ಕ್ಷೇತ್ರಕ್ಕೆ ಸೇವೆ ಸಲ್ಲಿಸುತ್ತಿರುವ **ಸೌ|| ತ್ರಿವೇಣಿಬಾಯಿ, ಪಂ|| ನರಸಿಂಹಾಚಾರ್ಯ ಆಶ್ರೀತ** ದಂಪತಿಗಳ ಸಂದರ್ಶನ

# ದಾಸವರ್ಯ ಜಗನ್ನಾಥದಾಸರ ಪ್ರಾಂತ್ಯದಲ್ಲಿ ಅಧಿಕಮಾಸ

## ಮಾನವಿಕ್ಷೇತ್ರದ ಸುತ್ತಮುತ್ತ ಅಧಿಕಮಾಸದ ಆಚರಣೆಯ ವಿಶೇಷವೇನು ?

ಶ್ರೀಹರಿಕಥಾಮೃತಸಾರದ ವ್ಯಾಪ್ತಿಸಂಧಿಯಲ್ಲಿ ದಾಸವರ್ಯ ಶ್ರೀಜಗನ್ನಾಥದಾಸರು ಪುರುಷೋತ್ತಮ ಮಾಸನಿಯಾಮಕನ ಮಹತ್ವಪೂರ್ಣ ಗುಣಗಳನ್ನು ವರ್ಣಿಸಿದ್ದಾರೆ. ಹೀಗೆಂದ ಬಳಿಕ ಮಾನ್ವಿ, ಸಿಂಧನೂರು ಮತ್ತಿತರ ಸ್ಥಳದಲ್ಲಿ ಸಹಜವಾಗಿ ಮತ್ತು ವಿಶೇಷ ಆಸಕ್ತಿಯಿಂದ ಭಕ್ತಜನ ಪುರುಷೋತ್ತಮಮಾಸವನ್ನು ಆಚರಿಸುತ್ತಾ ಬಂದಿದ್ದಾರೆ.

ಇತ್ತೀಚಿನವರೆಗೆ ಈ ಪ್ರಾಂತ್ಯದ ಜನರಿಗೆ ಮಾರ್ಗದರ್ಶಕರಾಗಿದ್ದ **ತಪಸ್ವಿ ಸಿರಿವಾರದ ರಾಮಾಚಾರ್ಯಮುತ್ಯರವರು** ಪುರುಷೋತ್ತಮಮಾಸದ ಮಹತ್ವವನ್ನು ಜನಪ್ರಿಯಗೊಳಿಸಿದ್ದಾರೆ. **ಗುಡಿಬಲ್ಲೂರು ಶೇಷಾಚಾರ್ಯ, ಐಕೂರು ನರಸಿಂಹಾಚಾರ್ಯ, ರಾಮದುರ್ಗದ ಮಾಧವೇಶಾಚಾರ್ಯ, ಅರ್ಚಕ ರಾಮಾಚಾರ್ಯ** – ಇವರೇ ಮೊದಲಾದ ಮಹನೀಯರು ತಮ್ಮ ಪ್ರವಚನಗಳಲ್ಲಿ ಸಂಪ್ರದಾಯದ ಮಹತ್ವವನ್ನು ಜನಮನಕ್ಕೆ ಮನಮುಟ್ಟುವಂತೆ ವಿವರಿಸಿದ್ದಾರೆ.

ಪುರುಷೋತ್ತಮಮಾಸದಲ್ಲಿ ಜಗನ್ನಾಥದಾಸರ ಕೃತಿಗಳ ಪುನಶ್ಚರಣಗಳೊಂದಿಗೆ ದಾನಧರ್ಮಗಳನ್ನು ಯಥೋಚಿತವಾಗಿ ನಡೆಸುವುದು ಇಲ್ಲಿನ ಆಸ್ತಿಕ ಕುಟುಂಬಗಳ ಪದ್ಧತಿಯಾಗಿದೆ.

## ಮುಂದಿನ ಪೀಳಿಗೆಗೆ ಈ ವ್ರತಬೇಕೇ?

ಪ್ರಾಂಜಲ ಮನಸ್ಸಿನಿಂದ ಶ್ರೀಹರಿ ಸೇವೆಯನ್ನು ಮಾಡುವ ಕಾಲ ಅಧಿಕಮಾಸ. ವಿಷ್ಣುಭಕ್ತಿ ಮತ್ತು ಸಂಪ್ರದಾಯಶೀಲತೆ ಪುರುಷೋತ್ತಮ ಮಾಸದ ಮುಖ್ಯ ಅಂಶ. ಆತ್ಮಪರಿಶುದ್ಧತೆಗಾಗಿ ವ್ರತಯಾಗಾದಿಗಳನ್ನು ನಡೆಸುವುದರಿಂದ ಮನೆಯಲ್ಲಿ ಮಕ್ಕಳು ಸನ್ಮಾರ್ಗದಲ್ಲಿ ಜೀವನ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ.

**ವಿಳಾಸ : ಸುಳಾದಿ ಪ್ರಚಾರ ಕ್ರೇಂದ್ರ, ಮಾನ್ವಿ ರಾಯಚೂರು-584104**



ಶ್ರೀ ಪುರುಷೋತ್ತಮ ಮಾಸ :
ಪ್ರಶ್ನೆ – ಉತ್ತರ
ಒಂದು ಅಧ್ಯಯನ

ನಾಡಿನ ಖ್ಯಾತ ಸಂಸ್ಕೃತ ಭಾಷಾ ಅಧ್ಯಾಪಕ, ಉಪನ್ಯಾಸಕ, ಚಿಂತಕ, ಸಹೃದಯಿ **ಪಂಡಿತ ರಾಮವಿಠ್ಠಲಾಚಾರ್ಯ**ರನ್ನು ಪುರುಷೋತ್ತಮಮಾಸ ಕುರಿತಂತೆ ಪ್ರಶ್ನಿಸಿದಾಗ

# ನಡೆಯುವುದೇ ಯಾತ್ರೆ : ನುಡಿಯುವುದೇ ಸ್ತೋತ್ರ

## ಈ ಸಂದರ್ಭದಲ್ಲಿ ನಿಮ್ಮ ಅನಿಸಿಕೆಗಳೇನು?

ಹರಿದಾಸರಾದ **ಜಯೇಶ ವಿಠಲರು** ಮಾತೊಂದನ್ನು ಹೇಳಿದ್ದಾರೆ :

**ಸಾಧನದ ಚಿಂತೆ ಎನಗೇಕೋ ದೇವ**
**ಮಾಧವನೆ ನಿನ್ನ ನಾಮ ಧರಿಸಿಕೊಂಡಾಗ**
**ನಡೆಯುವುದೇ ಯಾತ್ರೆ, ನುಡಿವುದೇ ಸ್ತೋತ್ರ**
**ಬಿಡದೆ ನೋಡುವುದೆಲ್ಲವೂ ನಿನ್ನ ಮೂರುತಿ**

ಇದೇ ಮಾತನ್ನು ಮಹಾಮಹಿಮರಾದ **ಶ್ರೀವಿಜಯದಾಸರು** ಇನ್ನೊಂದು ರೀತಿಯಲ್ಲಿ ಹೇಳುತ್ತಾರೆ :

**ಸ್ನಾನ, ಮೌನ, ದಾನ, ವ್ರತ, ನಿಯಮಗಳಿಗಿಂತ**
**ಸಾಧನೆಗೆ ಜ್ಞಾನಿಗಳ ಪಾದರೇಣು ದಯಪಾಲಿಸೆಯಾ**

**ಪ್ರತಿಯೊಂದು ವ್ರತಾಚರಣೆಯಲ್ಲಿಯೂ ಶ್ರೀಹರಿಯನ್ನು ಧ್ಯಾನಿಸುವ ಸಾಂಕೇತಿಕ ಸಾಧನಾಶ್ರಮವಿರುತ್ತದೆ.** ಭಕ್ತಿಸಾಧನೆಗೆ ಉತ್ತಮ ವಾತಾವರಣ ಬೇಕೆನ್ನಿಸಿದವರಿಗೆ ಅಧಿಕಮಾಸ ಸೂಕ್ತ ಸಮಯ. ಭಕ್ತಿ – ಅರ್ಚನೆಗಳಿಗೆ ಸೂಕ್ತವೇನೋ ನಿಜ. ಆದರೆ ಮತ್ತೊಬ್ಬರು ಆಚರಿಸಿದಂತೆಯೇ ಅಧಿಕಮಾಸವನ್ನಾಗಲೀ, ಇನ್ನಾವುದೇ ವ್ರತವನ್ನಾಗಲೀ ಆಚರಿಸಲೇಬೇಕೆಂಬ ಅನುಕರಣೆ ಸಲ್ಲದು. **ಸಾಲ – ಸೋಲ ಮಾಡಿ ದಾನ ಧರ್ಮಕ್ಕಾಗಿ ಧಾವಿಸುವುದಂತೂ ಖಂಡಿತ ಸರಿಯಲ್ಲ.**

ಈ ದಿಶೆಯಲ್ಲಿ **ಶ್ರೀವಿಜಯದಾಸರ** ಆದೇಶವನ್ನು ನೆನಪಿನಲ್ಲಿಟ್ಟುಕೊಳ್ಳುವುದೇ ಸೂಕ್ತ. ಕೇವಲ **ದಾನಕ್ಕಾಗಿ ಧಾವಂತ ಬೇಡ ಎನ್ನುತ್ತಾರೆ ದಾಸರು.**

**ಹಲವು ಅಪೇಕ್ಷಿಸಿ ಹಲುಬುವುದ್ಯಾತಕೆ**
**ಫಲ ಮುಂದಿರಲು ನಭತಳವ (ಭೂಗರ್ಭ) ಅರಿಸಿದಂತೆ**
**ಚಲುವದೇವರ ದೇವ ವಿಜಯವಿಠ್ಠಲರೇಯ ನಿನ್ನ**
**ನೆಲೆಬಲ್ಲವರ ಪಾದ ಅದಾವ ಭವಸಾರ**

**ವಿಳಾಸ: ನಂ. 52, 1ನೇ ಅಡ್ಡರಸ್ತೆ, ಶ್ರೀರಾಮಪುರ, ಬೆಂಗಳೂರು-560020**

ಹರಿದಾಸಸಾಹಿತ್ಯದ ಮೌಲ್ಯಗಳನ್ನು ಯುವಜನರಿಗೆ ಮನಹಿಡಿಸುವಂತೆ ವಿವರಿಸುವ ಜ್ಞಾನಯಜ್ಞ ನಡೆಸುತ್ತಿದ್ದಾರೆ **ಪ್ರೊ॥ಮಾನಕರಿ ಶ್ರೀನಿವಾಸಾಚಾರ್ಯ.** ಬಳ್ಳಾರಿಯಲ್ಲಿ ಇವರೊಂದಿಗೆ ಸಂದರ್ಶನ.

# ನಿತ್ಯಪುರುಷೋತ್ತಮತ್ವ ಪ್ರತಿಪಾದನೆ

### ದಾಸಸಾಹಿತ್ಯಕೃತಿಗಳಲ್ಲಿ ಅಧಿಕಮಾಸದ ಉಲ್ಲೇಖ ಕಡಿಮೆ. ಕಾರಣಗಳೇನು?

ಇದು ಸರಿಯಾದ ಅಭಿಪ್ರಾಯವಲ್ಲ. ಹರಿದಾಸರುಗಳ ಲಕ್ಷಾಂತರ ಕೃತಿಗಳು ಇನ್ನೂ ಸಿಕ್ಕಿಲ್ಲ. ಸಿದ್ಧಮಾಹಿತಿ ಸಂಗ್ರಹಕ್ಕೆ ನಾವು ಹೆಚ್ಚು ಗಮನ ಕೊಟ್ಟಿಲ್ಲ. ಜೋಪಾನವಾಗಿ ಕೃತಿಯನ್ನು ರಕ್ಷಿಸುವ ಕಾರ್ಯ ಮತ್ತಷ್ಟು ವ್ಯವಸ್ಥಿತವಾಗಿ ನಡೆಯಬೇಕಾಗಿದೆ.

### ದಾಸವಾಙ್ಮಯದಲ್ಲಿ ಪುರುಷೋತ್ತಮತ್ವ ಪ್ರಧಾನವಾಗಿ ಪ್ರಸ್ತಾಪಿತವಾಗಿದೆ. ಹೌದೇ?

ಭಗವದ್ಗೀತೆಯ 15ನೇ ಅಧ್ಯಾಯದಲ್ಲಿ, ಶ್ರೀವಾದಿರಾಜ ಯತಿವರ್ಯರ ಹರಿಸರ್ವೋತ್ತಮಸಾರ, ಸ್ವಪ್ನಪದ ಮತ್ತು ಗುಂಡಕ್ರಿಯೆಗಳಲ್ಲಿ ಮತ್ತು ಶ್ರೀಜಗನ್ನಾಥದಾಸರ ಹರಿಕಥಾಮೃತಸಾರದ ವ್ಯಾಪ್ತಿಸಂಧಿಯಲ್ಲಿ ಪುರುಷೋತ್ತಮ ತತ್ವ ಪ್ರತಿಪಾದನೆ ಭವ್ಯವಾಗಿ ನಡೆದಿದೆ. ಶ್ರೀಪಾದರಾಜರು, ವ್ಯಾಸರಾಜರು, ಪುರಂದರದಾಸರು, ಕನಕದಾಸರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರುಗಳು ಹರಿಸರ್ವೋತ್ತಮತ್ವವನ್ನು ವಿವರಿಸಲು ಮಾಸಧರ್ಮವನ್ನು ಪ್ರಧಾನವಾಗಿ ಬಳಸಿಕೊಂಡಿದ್ದಾರೆ.

### ಅಧಿಕಮಾಸದಲ್ಲಿ ನಿಷೇಧಗಳೇ ಹೆಚ್ಚು ಇರಲು ಕಾರಣ?

ವಾಸ್ತವವಾಗಿ ಇದೊಂದು ನಕಾರಾತ್ಮಕ ಅಭಿವ್ಯಕ್ತಿ. ಪುರುಷೋತ್ತಮನೇ ಅಧಿಪತಿಯಾದ ಮಾಸದಲ್ಲಿ ನಿಷೇಧ ಹೇಗೆ ಸಾಧ್ಯ? ಇಲ್ಲೊಂದು ಧರ್ಮಸೂಕ್ಷ್ಮ ಇದೆ. ಸಕಾರಾತ್ಮಕ ಅಂಶಗಳನ್ನು ತಿಳಿ ಹೇಳುವ ಸಲುವಾಗಿ ನಿಷೇಧವನ್ನು ಒತ್ತಿ ಒತ್ತಿ ಹೇಳುವುದು ಮಾನವ ಸಹಜ ಸ್ವಭಾವ.

ಉದಾಹರಣೆಗೆ ಅಧಿಕಮಾಸದಲ್ಲಿ ಯಾತ್ರೆಗೆ ಹೋಗುವುದು ತರವಲ್ಲ ಎನ್ನುವುದಕ್ಕೆ ಬದಲಾಗಿ ಒಂದೇ ಸ್ಥಳದಲ್ಲಿ ಕುಳಿತು ಸಂಪೂರ್ಣವಾದ ಭಗವದಾರಾಧನೆಯನ್ನು ನಡೆಸುವುದಕ್ಕೆ ಈ ಅಧಿಕಮಾಸ ಅಪೂರ್ವ ಸಮಯ ಎಂದು ಹೇಳಬಹುದಿತ್ತು.

ಮೂಲತಃ ಜೀವನ ಪರ್ಯಂತ ನಿತ್ಯ ಪುರುಷೋತ್ತಮತ್ವವನ್ನು ಪ್ರತಿಪಾದಿಸುವ ಭಕ್ತನಿಗೆ ಪ್ರತ್ಯೇಕಮಾಸ ಏನು ಅಗತ್ಯ?

**ವಿಳಾಸ : ನಂ. 79, ಹರಿದಾಸ ವಿದ್ಯಾನಿಲಯ, ಗಣೇಶ ಕಾಲೋನಿ, ಬಳ್ಳಾರಿ - 583103.**





ವಿಷ್ಣುಸಹಸ್ರನಾಮ ಪುನಶ್ಚರಣದ ಮೂಲಕ ಗುಲ್ಬರ್ಗಾ ಜಿಲ್ಲೆಯ ಸೇಡಂನಲ್ಲಿ ಭಕ್ತಿಯ ಆಂದೋಲನ ನಡೆಸುತ್ತಿರುವ **ಪ್ರಾಧ್ಯಾಪಕ ಡಾ॥ ವಾಸುದೇವ ಅಗ್ನಿಹೋತ್ರಿಯವರನ್ನು** ಫೋನಿನಲ್ಲಿ ಸಂಪರ್ಕಿಸಿದಾಗ

# ಸಹಾಯಹಸ್ತವಾದ ಅಧಿಕಮಾಸ

### ಈ ಮಾಸವನ್ನು ನಿಮ್ಮ ಪ್ರಾಂತ್ಯದಲ್ಲಿ ಹೇಗೆ ಆಚರಿಸುತ್ತೀರಿ?

ಅಧಿಕಮಾಸದಲ್ಲಿ ವಿಶೇಷ ತಿಂಡಿ ತಿನಿಸುಗಳನ್ನು ತಯಾರಿಸಿ **ಮನೆ ಅಳಿಯನಿಗೆ ಇಲ್ಲವೇ ಸೋದರ ಅಳಿಯನಿಗೆ** ಅವುಗಳನ್ನು ದಾನಮಾಡುವದು ಸೇಡಂ ಪ್ರಾಂತ್ಯ ಸೇರಿದಂತೆ ಕೆಲವೆಡೆಗಳಲ್ಲಿ ಇಂದಿಗೂ ಪದ್ಧತಿ ಇದೆ.

ಉರಿಬಿಸಿಲಿನ ಬೇಸಿಗೆಯ ಹಿನ್ನೆಲೆಯಲ್ಲಿ ಇಂತಹ ಸಂಪ್ರದಾಯ ನಿಜಕ್ಕೂ ಸ್ವಾಗತಾರ್ಹ. ಸೂಕ್ತಕಾಲದಲ್ಲಿ ದಾನಮಾಡಿದ ಸಮಾಧಾನ ಇಲ್ಲಿದೆ.

ಕಳೆದ ವರ್ಷದಿಂದ ನಾವು ಹೊಸರೀತಿಯಲ್ಲಿ ಅಧಿಕಮಾಸವನ್ನು ಆಚರಿಸುತ್ತಲಿದ್ದೇವೆ. **ಸೇಡಂನಗರದ ಆಯ್ದ 33 ಭಕ್ತರ ಮನೆಯಲ್ಲಿ ಪುರುಷೋತ್ತಮಮಾಸದಲ್ಲಿ ಪ್ರತಿದಿನ ಮುಂಜಾನೆ 6 ರಿಂದ 7ರೊಳಗಾಗಿ ವಿಷ್ಣುಸಹಸ್ರನಾಮ ಪಾರಾಯಣ ಮಾಡುತ್ತ ಬಂದಿದ್ದೇವೆ.**

### ಮತ್ತೆಲ್ಲಿಯಾದರೂ ವಿಶೇಷ ಕಂಡೀರೇನು ?

ಸೇಡಂನ ಸಮೀಪದ ಆಂಧ್ರಪ್ರದೇಶದ ಮೆಹಬೂಬುನಗರದಲ್ಲಿ **ಖ್ಯಾತ ವಿದ್ವಾಂಸ ರಾಮಚಾರ್ಯರ ವಂಶಸ್ಥರು ಅಧಿಕಮಾಸದಲ್ಲಿ ಪುರಂದರದಾಸರ ಕೃತಿಗಳ ಜ್ಞಾನಸತ್ರ ನಡೆಸುತ್ತಾರೆ.** ಇದೇ ರೀತಿ ಸೇಡಮ್ ನಗರದ **ಭೀಮೇಶಕೃಷ್ಣ ಮಹಿಳಾ ಭಜನಾ ಮಂಡಳಿಯು ವಿದ್ಯಾನಗರದಲ್ಲಿ ಮಹಿಳೆಯರಿಗೆ ದಾಸ ಸಾಹಿತ್ಯಗ್ರಂಥಗಳನ್ನು ದಾನ ಮಾಡಿ ಜ್ಞಾನಯಜ್ಞ ಮಾಡುತ್ತಾರೆ.**

ಸೇಡಮ್ ನಗರದ **ವಿಶ್ವಕರ್ಮ ಬಂಧುಗಳು ಅಧಿಕಮಾಸದಲ್ಲಿ ''ಚಿನಿವಾರ ಪುರಂದರದಾಸರು'' ಎನ್ನುವ ಚಿಂತನಾ ವೇದಿಕೆಯಲ್ಲಿ ಪುರಂದರದಾಸರ ಕೃತಿಗಳ ಅವಲೋಕನ ಮಾಡುತ್ತಾ ಬಂದಿದ್ದಾರೆ.**

**ವಿಳಾಸ : ಕನ್ನಡ ಪ್ರಾಧ್ಯಾಪಕ, ನೂತನ ಮಹಾವಿದ್ಯಾಲಯ, ಸೇಡಂ-585222**

ವಲ್ಲಭ-ಮಧ್ವಸಂಪ್ರದಾಯದ ಕೃಷ್ಣಕಾವ್ಯಕುರಿತಂತೆ ಡಾಕ್ಟರೇಟ್ ಪಡೆದ
**ಡಾ|| ಎನ್.ಜಿ. ವಿಜಯಲಕ್ಷ್ಮೀರಾಘವೇಂದ್ರಾಚಾರ್ಯ** ಇವರನ್ನು
ಮಾಸಧರ್ಮಕ್ಕಾಗಿ ಸಂಪರ್ಕಿಸಿ ಪ್ರಶ್ನಿಸಿದಾಗ

ಪ್ರಶ್ನೆ - ಉತ್ತರ
ಒಂದು ಅಧ್ಯಯನ

# ಗ್ರಂಥಗಳನ್ನು ಓದಿ - ಇದೊಂದು ಸಲಹೆ

**ಪುರುಷೋತ್ತಮಮಾಸದಲ್ಲಿ ಯಾವ ಗ್ರಂಥಗಳನ್ನು ಓದಬೇಕು?**

ಪುರಾತನ ಪುರುಷ ಪುರುಷೋತ್ತಮನ ರೂಪ ತ್ರಯಗಳನ್ನು ಶ್ರೀ ಹರಿಕಥಾಮೃತಸಾರದ ವ್ಯಾಪ್ತಿ ಸಂಧಿಯ ಮೊದಲನೇ ಪದ್ಯದಲ್ಲಿ ವರ್ಣಿಸಿದ್ದಾರೆ ಮಾನವಿ ಜಗನ್ನಾಥದಾಸರು:

**ಪುರುಷ ರೂಪತ್ರಯ ಪುರಾತನ ।**
**ಪುರುಷ ಪುರುಷೋತ್ತಮಕ್ಷರಾಕ್ಷರ ।**
**ಪುರುಷ ಪೂಜಿತ ಪಾದ ಪೂರ್ಣಾನಂದ ಜ್ಞಾನಮಯ ॥**

**ಪುರುಷ ಸೂಕ್ತ ಸುಮೇಯ ತತ್ತ ।**
**ತ್ಪುರುಷ ಹೃತ್ಪುಷ್ಕರನಿಲಯ ಮಹಾ ।**
**ಪುರುಷ ಜಾಂಡಾಂತರದಿ ಬಹಿರದಿ ವ್ಯಾಪ್ತ ನಿರ್ಲಿಪ್ತ ॥**

ಈ ಪುಣ್ಯ ಶ್ಲೋಕದೊಂದಿಗೆ ಪುರುಷೋತ್ತಮ ಮಾಸವನ್ನು ಕುರಿತಂತೆ ಶ್ರೀಹರಿಕಥಾಮೃತಸಾರ ಗ್ರಂಥದಲ್ಲಿ ಜಗನ್ನಾಥದಾಸರು ಪರಮಪುರುಷನನ್ನು ಸ್ತುತಿಸುವ ಹಲವಾರು ಪ್ರಮೇಯಗಳನ್ನು ವರ್ಣಿಸುತ್ತಾರೆ. **ಹರಿಕಥಾಮೃತಸಾರ ಗ್ರಂಥವನ್ನು ಓದಿ. ಇದು ಅಧಿಕಮಾಸದಲ್ಲಿ ನೀವು ಮಾಡಬಹುದಾದ ಜ್ಞಾನ ವ್ರತ.**

ಅಂತೆಯೇ ಮಾಸ ವೈಶಿಷ್ಟ್ಯತೆಯನ್ನು ಮನನಮಾಡಿಕೊಳ್ಳಲು **ಪರಮಪ್ರಿಯ ಶ್ರೀ ತಂದೆ ಮುದ್ದುಮೋಹನ ವಿಠ್ಠಲದಾಸರಿಂದ ಆಜ್ಞಪ್ತರಾದ ಪ್ರಿಯಶಿಷ್ಯ ಶ್ರೀಪದ್ಮನಾಭದಾಸರ ''ಭಾವವ್ಯಾಖ್ಯಾನ'' ಸಹಿತ ಈ ಮಾಸದಲ್ಲಿ ಅಭ್ಯಸಿಸುವುದು ಸೂಕ್ತ.** ಈ ವ್ಯಾಖ್ಯಾನವನ್ನು ದೇವರಾಯನದುರ್ಗದ ದಾಸಕೂಟ ಸಭಾದವರು ಪ್ರಕಟಿಸಿದ್ದಾರೆ.

ಇದೇ ಸಂದರ್ಭದಲ್ಲಿ **ಭಕ್ತರು** ಓದಲೇಬೇಕಾದ **ಮತ್ತೊಂದು** ಗ್ರಂಥವೆಂದರೆ ಸಂತ ಭದ್ರಗಿರಿ ಅಚ್ಯುತದಾಸರು ಬರೆದ ಶ್ರೀ ಹರಿಕಥಾಮೃತ ಸಿಂಧು (ಸಂಪುಟ 2) ಶ್ರೀಮದ್ಭಾಗವತದ ಶ್ರೀಕೃಷ್ಣಕಥಾವಾಹಿನಿ ಭಾಗ 1 (ಪುಟ 113 ಮತ್ತು 114)

**ವಿಳಾಸ : ನಂ. 333, 12ನೇ ಮುಖ್ಯರಸ್ತೆ, ಗೋಕುಲ ಬಡಾವಣೆ, ಬೆಂಗಳೂರು - 560054.**





ವಿಶ್ವದ ಮೂಲೆಮೂಲೆಗಳಲ್ಲಿರುವ ಹರಿಭಕ್ತರೊಂದಿಗೆ
ಸಂಪರ್ಕವಿಟ್ಟುಕೊಂಡು ದಾಸಸಾಹಿತ್ಯದ ರಾಯಭಾರಿಯಾಗಿರುವ
**ಡಾ|| ಅರಳುಮಲ್ಲಿಗೆ ಪಾರ್ಥಸಾರಥಿ**ಯವರೊಂದಿಗೆ ಸಂದರ್ಶನ

ಪ್ರಶ್ನೆ - ಉತ್ತರ
ಒಂದು ಅಧ್ಯಯನ

# ಭಕ್ತಿ ಪಕ್ವತೆಯ ಸಾಧನ - ವ್ರತ ನಿಯಮ

**ಹರಿದಾಸಸಾಹಿತ್ಯದಲ್ಲಿ ಅಧಿಕಮಾಸ ಕುರಿತಂತೆ ಉಲ್ಲೇಖಗಳು ಹೆಚ್ಚು ಇಲ್ಲ ? ನೀವೇನೆನ್ನುವಿರಿ?**

ಹರಿದಾಸ ಶ್ರೇಷ್ಠರುಗಳು ತಮ್ಮ ಕೃತಿಗಳಲ್ಲಿ ಅಧಿಕಮಾಸದ ವ್ರತ, ನಿಯಮ, ದಾನ, ಧರ್ಮಗಳ ಬಗೆಗೆ ಹೆಚ್ಚು ಪ್ರಸ್ತಾಪಿಸಿದ್ದಾರೆಯೇ ಇಲ್ಲವೇ ಎನ್ನುವ ಸಂದಿಗ್ಧತೆ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ಹಾಗೂ ಸಂಶೋಧನೆ ಆಗಬೇಕಾಗಿದೆ. ಇದು ನನ್ನ ಸ್ಪಷ್ಟ ಅಭಿಮತ.

**ಭಕ್ತರುಗಳಿಗೆ ಆಯಾಮಾಸ ಕುರಿತಂತೆ ಭಾವನಾತ್ಮಕ ಸಂಬಂಧ ಬೆಳೆದಂತೆಲ್ಲಾ ಮಾಸನಿಯಾಮಕ ಸ್ವಾಮಿಯನ್ನು ಕುರಿತು ಪೂಜೆ, ವ್ರತ, ದಾನ, ಧರ್ಮಗಳನ್ನು ಮಾಡುವ ಸಂಪ್ರದಾಯ ನಮ್ಮಲ್ಲಿ ಬೆಳೆದು ಬಂದಿದೆ. ದಾಸಸಾಹಿತ್ಯ ಈ ಭಾವನೆಗೆ ಇಂಬುಕೊಡುವ ಜ್ಞಾನಸಾಗರ.**

**ವ್ರತ ಮಾಡಲು ಅವಕಾಶವಿಲ್ಲದಿದ್ದರೆ ಏನು ಮಾಡುವುದು ?**

ಭಕ್ತಿಯ ಪೂರ್ಣತೆ ಹಾಗೂ ಪಕ್ವತೆಗೆ ವ್ರತಾಚರಣೆಯು ಸಾಧನಾ ಪ್ರಯತ್ನ ಮತ್ತು ಪೂರಕ ಶಕ್ತಿ. ಹರಿದಾಸರುಗಳು ಹೇಳಿದಂತೆ ನಿನ್ನದೇ **ಸಕಲ ಸೌಭಾಗ್ಯ ಸಾಧನವು, ಹರಿಯೇ ನನ್ನದು ಎಂಬ ಅಭಿಮಾನ ಲವಶೇಷ ಸಲ್ಲದಯ್ಯ.**

ಹರಿದಾಸರ ಮತ್ತೊಂದು ವೇದವಾಕ್ಯ ಈ ಸಂದರ್ಭದಲ್ಲಿ ನೆನಪಾಗುತ್ತದೆ.

**ಸತ್ಯ ಚಿತ್ತನೆ ನೀನು, ನಿನ್ನ ಚಿತ್ತ ಎನ್ನಯ ಭಾಗ್ಯ, ದಾನ ಧರ್ಮಗಳೆಂಬ ಕರ್ತವ್ಯದಭಿಮಾನ ಕಳೆದುಕಾಯೋ ಮತ್ತೇನ ಬೇಡೆನು ನಾನು, ಪರತಂತ್ರ ನಾನಯ್ಯ, ಮುಕ್ತಿದಾಯಕ ಈಶ ಶ್ರೀ ಕರಿಗಿರೀಶ.**

**ವಿಳಾಸ: ''ಹರಿದಾಸ ಭವನ'', 1120, 7ನೇ ಅಡ್ಡರಸ್ತೆ, ಗಿರಿನಗರ , ಬೆಂಗಳೂರು - 560 085**

ಪ್ರಶ್ನೆ – ಉತ್ತರ
ಒಂದು ಅಧ್ಯಯನ

<u>ಸೌ|| ವಿದ್ಯಾ ಮತ್ತು ಶ್ರೀ ಪಿ. ನಾಮಣ್ಣನವರ</u> ಇವರು ದೂರದ ಗುಜರಾತಿನ ಅಂಕಲೇಶ್ವರದಲ್ಲಿ ನೆಲೆಸಿದ್ದಾರೆ. ಫೋನಿನಲ್ಲಿ ಕೇಳಿದ ಪ್ರಶ್ನೆಗಳಿಗೆ ಅವರಿತ್ತ ಉತ್ತರ ಕೆಳಕಂಡಂತಿದೆ.

## ಭಕ್ತಿಯಿಂದ ದಾನ ಕೊಡುವ ಮಾಸ

**ಗುಜರಾತ ರಾಜ್ಯದಲ್ಲಿರುವ ನಿಮಗೆ ಅಧಿಕಮಾಸ ಕುರಿತಂತೆ ಏನನಿಸುತ್ತದೆ?**

ಭಾರತೀಯ ಸಂಸ್ಕೃತಿ ಎಲ್ಲ ಕಡೆಯೂ ಒಂದೇ ರೀತಿಯದಾಗಿದೆ. ಇಲ್ಲಿಯೂ (ಗುಜರಾತದಲ್ಲಿ) ಹರಿಭಕ್ತರಿದ್ದಾರೆ. ಶ್ರೀಕೃಷ್ಣನ ಕರ್ಮಭೂಮಿ ಗೋಕುಲ ಗುಜರಾತದಲ್ಲಿದೆ. ಜಗತ್ತಿಗೆ ಶಾಂತಿಸಂದೇಶ ಸಾರಿದ ಮಹನೀಯರು ಗುಜರಾತನಿಂದ ಬಂದವರು.

ಇಲ್ಲಿನ ಜನ ಕನ್ನಡನಾಡಿನ ಜನರಂತೆ ಮಾಸವನ್ನು ವಿಶೇಷವಾಗಿ ಆಚರಿಸದಿದ್ದರೂ ದಾನಧರ್ಮಗಳಲ್ಲಿ ಉಳಿದ ಎಲ್ಲರಿಗಿಂತಲೂ ಒಂದು ಹೆಜ್ಜೆ ಮುಂದಿದ್ದಾರೆ. ವರ್ಷವಿಡೀ ಧರ್ಮಕಾರ್ಯ ಇಲ್ಲಿ ನಡೆಯುತ್ತವೆ.

**ದಾನ, ಧರ್ಮ ಇವುಗಳ ಸಾರ್ಥಕತೆ ಏನು ?**

ಈ ಪ್ರಶ್ನೆಗೆ ಹೀಗೆ ಉತ್ತರಿಸಬಹುದು . ದೇಶದ ಹಣಕಾಸುಮಂತ್ರಿ ಬಡವ ಶ್ರೀಮಂತರನ್ನು ಸೇರಿಸಿಕೊಂಡು ವರ್ಷದ ಆಯವ್ಯಯ(ಬಜೆಟ್) ತಯಾರಿಸುವಂತೆ ನಮ್ಮಪ್ಪ ಪರಮಾತ್ಮನು ಭಕ್ತರಿಂದ ಯೋಗ್ಯತಾನುಸಾರ ದಾನ ಸ್ವೀಕರಿಸುತ್ತಾನೆ. ಸುಧಾಮನ ಅವಲಕ್ಕಿ ಇದಕ್ಕೊಂದು ನಿದರ್ಶನ. ಶಬರಿಯು ನೀಡಿದ ಹಣ್ಣು ಶ್ರೀರಾಮಗೆ ಅಮೃತ ಸಮಾನ.

ಅಂತಿಮವಾಗಿ ಭಕ್ತರು ಮಾಡುವ ದಾನವನ್ನು ಶ್ರೀಹರಿ ಪುರುಷೋತ್ತಮ ಮಾಸದಲ್ಲಿ ನೇರವಾಗಿ ಸ್ವೀಕರಿಸುತ್ತಾನೆ. ಹರಿದಾಸರು ತಮ್ಮ ಕೃತಿಗಳಲ್ಲಿ ಈ ಸಂದೇಶವನ್ನು ಮೇಲಿಂದ ಮೇಲೆ ಹೇಳಿದ್ದಾರೆ.

ಹರಿಕೊಟ್ಟಾಗ ಧರ್ಮಮಾಡಿ ಎಂದ ಶ್ರೀ ಪ್ರಸನ್ನವೆಂಕಟದಾಸರ ಮಾತು ಪುರುಷೋತ್ತಮಮಾಸಕ್ಕೆ ಒಪ್ಪುವಂತಹುದು.

**ವಿಳಾಸ: - ಇ-2, ನಿಶಾಂತ ನಗರ, ರಾಮನಗರ ಮುಂಭಾಗ, ಅಂಕಲೇಶ್ವರ - 393001,**





ಪ್ರಶ್ನೆ – ಉತ್ತರ
ಒಂದು ಅಧ್ಯಯನ

**ರಂಗವಿಠಲ** ಪತ್ರಿಕೆಯ ಶ್ರದ್ಧಾಪೂರ್ಣ ಲೇಖಕ, ರಾಯಚೂರಿನ ಹರಿದಾಸ <u>ಶ್ರೀ ಗುರುಶ್ಯಾಮವಿಠಲದಾಸರ</u>ನ್ನು ಪುರುಷೋತ್ತಮಮಾಸಕ್ಕಾಗಿ ಪ್ರಶ್ನಿಸಿದಾಗ

## ಪವಿತ್ರನದಿಗಳಲ್ಲಿ ಸ್ನಾನಮಾಡಿ

**ಅಧಿಕಮಾಸವನ್ನು ಎದುರುನೋಡುವ ಜನ ಇದ್ದಾರೆಯೇ?**

ಪುಣ್ಯವಶಾತ್ ನಮ್ಮ ಜನರಲ್ಲಿ ಇನ್ನೂ ಸಂಸ್ಕೃತಿ- ಸಂಸ್ಕಾರ ಉಳಿದುಕೊಂಡಿದೆ. ಇದಕ್ಕೆ ನಿದರ್ಶನ ಎನ್ನುವಂತೆ ಮೂರುವರ್ಷಗಳಿಗೊಮ್ಮೆ ಬರುವ ಅಧಿಕಮಾಸವನ್ನು ಎದುರು ನೋಡುವ ಜನ ಇಂದಿಗೂ ಇದ್ದಾರೆ. ಪುಣ್ಯಕಾರ್ಯಗಳಿಗೆ ಪುರುಷೋತ್ತಮಮಾಸ 'ಬೋನಸ್' ಇದ್ದಂತೆ.

ಪರಮಾತ್ಮನ ಸ್ಮರಣೆ, ಧ್ಯಾನ, ಗಾನ ಮತ್ತು ಕೀರ್ತನೆಗೆ ಅಧಿಕಮಾಸವನ್ನು ಮೀಸಲಾಗಿ ಇಡುವ ಹಲವಾರು ಪುಣ್ಯಜೀವಿಗಳು ಇಂದಿಗೂ ನಮ್ಮ ಮಧ್ಯೆ ಇದ್ದಾರೆ.

**ಅಧಿಕಮಾಸದಲ್ಲಿ ಏನು ಬೇಡಬೇಕು; ಏನು ಪ್ರಾರ್ಥಿಸಬೇಕು ?**

ಶ್ರೀ ಶ್ರೀಪಾದರಾಜರು ಈ ಪ್ರಶ್ನೆಗೆ ಆರುನೂರು ವರ್ಷದ ಹಿಂದೆಯೇ ಉತ್ತರಿಸಿದ್ದಾರೆ.

> ಗ್ರಾಸಗಳಿಲ್ಲವೆಂದು ನಿನ್ನ ಬೇಸತ್ತು ಬಂದುದಿಲ್ಲ, ವಾಸುದೇವನೇ ನಿನ್ನ
> ದಾಸರ ದಾಸರ ದಾಸ್ಯವ ಕೊಡು ಸಾಕು.

**ಯಾವುದಾದರೊಂದು ವಿಶೇಷಸೇವೆಯನ್ನು ಹೇಳಿ?**

ಇತ್ತೀಚಿನ ದಿನಗಳಲ್ಲಿ ಪವಿತ್ರನದಿಗಳಲ್ಲಿ ಸ್ನಾನಮಾಡುವ ಪುಣ್ಯಕಾರ್ಯ ವಿರಳವಾಗುತ್ತಿದೆ. ನಮ್ಮ ಹಿರಿಯರು ಶತಮಾನಗಳಿಂದ ನಡೆಸಿಕೊಂಡು ಬಂದ ಪವಿತ್ರಕಾರ್ಯವಿದು. ಗಂಗೆ, ತುಂಗೆ, ಭದ್ರೆ, ಯಮುನೆ, ಕೃಷ್ಣೆ ಗೋದಾವರಿ ಕಾವೇರಿ, ಕಪಿಲೆ, ಹೇಮಾವತಿ, ಮಲಪ್ರಭೆ ಹೀಗೆ ನೂರಾರು ನದಿಗಳಲ್ಲಿ ಮಿಂದು ಪರಮಾತ್ಮನನ್ನು ಸ್ಮರಿಸುವ ಪುಣ್ಯಕಾರ್ಯ ಮಾಡಲು ಅಧಿಕಮಾಸ ಪುನರ್ ಅವಕಾಶ ಒದಗಿಸಿಕೊಟ್ಟಿದೆ.

**ವಿಳಾಸ : - ಶ್ರೀಗಿರಿಕೃಪಾ, 7-5-86/115, ಜವಾಹರನಗರ, ರಾಯಚೂರು- 584104.**

ಹರಿದಾಸ ಸಾಹಿತ್ಯವನ್ನು ಕಳೆದ 50 ವರುಷಗಳಿಂದ ಅಭ್ಯಸಿಸುತ್ತಿರುವ ಅನುಭವಿ, ಮೈಸೂರಿನ **ಶ್ರೀಮತಿ ಕುಮುದಾಬಾಯಿಯ**ವರನ್ನು ಫೋನಿನಲ್ಲಿ ಸಂಪರ್ಕಿಸಿದಾಗ

## ಒಳ್ಳೆಯದಾಗದಿದ್ದರೆ ಚಿಂತಿಲ್ಲ ; ಕೆಟ್ಟದು ಬೇಡ

**ಅಧಿಕಮಾಸ ಅಥವಾ ಮಲಮಾಸ ಎಂದು ಕರೆಯುವ ಈ ತಿಂಗಳಿಗೆ ಪುರುಷೋತ್ತಮಮಾಸವೆಂಬ ಶ್ರೇಷ್ಠತೆ ಇದೆ. ಏನು ಇದರ ವೈಶಿಷ್ಟ್ಯ?**

ಅಧಿಕಮಾಸದ ಒಂದು ತಿಂಗಳಲ್ಲಿ ರವಿ ಸಂಕ್ರಮಣ ಇರುವುದಿಲ್ಲ. ಈ ಮಾಸವನ್ನು ಮಲಮಾಸವೆನ್ನುತ್ತಾರೆ. ಮಲಮಾಸಾಭಿಮಾನಿಯು ಪುರುಷೋತ್ತಮನಲ್ಲಿ ಬಂದು ಈ ಅವಧಿಯಲ್ಲಿ ಯಾವ ಶುಭ ಕಾರ್ಯಕ್ರಮವಾಗಲಿ, ಹಬ್ಬವಾಗಲಿ ಏನನ್ನೂ ಆಚರಿಸುವುದಿಲ್ಲ. ನನಗೆ ವ್ಯಥೆಯಾಗುತ್ತಿದೆ ಎಂದು ದೈನ್ಯದಿಂದ ಬೇಡಿಕೊಂಡ. ಪುರುಷೋತ್ತಮನು ತನ್ನ ಹೆಸರನ್ನೇ ಮಲಮಾಸಕ್ಕೆ ಕೊಟ್ಟು ಆಗ ಮಾಡುವ ಎಲ್ಲಾ ದೇವತಾಕಾರ್ಯಕ್ಕೂ ಅಧಿಕಫಲವನ್ನು ಕೊಡುವುದಾಗಿ ಹೇಳಿ ಮಾಸಕ್ಕೆ **ಪುರುಷೋತ್ತಮ** ಶ್ರೇಷ್ಠತೆಯನ್ನು ಕೊಟ್ಟಿದ್ದಾನೆ.

**ವಂದೇ ವಂದಾರು ಮಂದಾರಂ ವೃಂದಾವನ ವಿನೋದಿನಂ ।**
**ವೃಂದಾವನ ಕಲಾನಾಥಂ ಪುರುಷೋತ್ತಮದ್ಭುತಂ ॥**

ಈ ಶ್ಲೋಕ ಪಠಿಸಲು ಯೋಗ್ಯವಾದದ್ದು . ಉಪವಾಸ, ವ್ರತ, ಏಕಭುಕ್ತ, ಧಾರಣ–ಪಾರಣ ಇವುಗಳನ್ನು ಒಂದು ತಿಂಗಳು ಮಾಡುವುದರಿಂದ ವಿಶೇಷ ಪುಣ್ಯವುಂಟು. ಒಂದು ತಿಂಗಳು ಪ್ರತಿದಿನ ತಾಂಬೂಲದಾನದಿಂದ **ಸೌಭಾಗ್ಯ ಪ್ರಾಪ್ತಿ,** ಪ್ರತಿದಿನ ದೇವರ ಸನ್ನಿಧಿಯಲ್ಲಿ ಅಖಂಡ ದೀಪದಾನದಿಂದ **ಲಕ್ಷ್ಮೀ ಪ್ರಾಪ್ತಿ,** ಪ್ರತಿದಿನ ಒಂದು ತಿಂಗಳು ಗಂಗಾ ಮೊದಲಾದ ಮಹಾನದಿಗಳಲ್ಲಿ ಪ್ರಾತಃ ಸ್ನಾನದಿಂದ **ಸರ್ವಪಾಪ ನಿವೃತ್ತಿ** –ಇವು ನಮ್ಮ ಹಿರಿಯರ ಕಾಲದಿಂದ ಬಂದ ಪುಣ್ಯವಿಶೇಷ ನಡವಳಿಕೆಗಳು.

ಪ್ರತಿದಿನ ದಾನಕೊಡಲು ಶಕ್ತಿ ಇಲ್ಲದಿದ್ದರೆ ತಿಂಗಳಲ್ಲಿ ಒಂದು ದಿನವಾದರೂ ಸಾಧ್ಯವಾದುದನ್ನು ದಾನ ಮಾಡಬೇಕು.

ಏನೂ ಸಾಧ್ಯವಾಗದಿದ್ದವರು ಪುರುಷೋತ್ತಮನನ್ನು ಸ್ತೋತ್ರ ಮಾಡಬೇಕೆಂದು ತಿಳಿಸಿದ್ದಾರೆ. **ಈ ಮಾಸದಲ್ಲಿ ತಪ್ಪಿಯೂ ಕೆಟ್ಟ ಕೆಲಸಗಳನ್ನು ಮಾಡಬಾರದು.** ಪುಣ್ಯಕಾರ್ಯಕ್ಕೆ 10 ಪಟ್ಟು ಅಭಿವೃದ್ಧಿಸಿಗುವಂತೆ ಪಾಪಕಾರ್ಯವೂ 10 ಪಾಲು ಹೆಚ್ಚುತ್ತದೆ.

**ವಿಳಾಸ: ನಂ. 2359/3-ಎ, 10ನೇ ಅಡ್ಡರಸ್ತೆ, ಬಸವೇಶ್ವರ ರಸ್ತೆ, ಮೈಸೂರು-570004.**





ವೇದಪಾರಂಗತ, ದಾಸಸಾಹಿತ್ಯ ಅಧ್ಯಯನಶೀಲ, ಈರೋಡಿನ ಭಜನಾಮಂಡಳಿಯ ಅಧ್ಯಕ್ಷ **ಪಿ. ಕೃಷ್ಣಮೂರ್ತಿ ಆಚಾರ್ಯ**ರನ್ನು ದೂರವಾಣಿಯಲ್ಲಿ ಸಂದರ್ಶಿಸಿದಾಗ

## ತಮಿಳುನಾಡಿನಲ್ಲಿ ಪುರುಷೋತ್ತಮಮಾಸ

**ಶ್ರೀರಂಗ ಮತ್ತು ಇತರ ಪ್ರಾಂತ್ಯಗಳಲ್ಲಿ ಈ ಮಾಸದ ಆಚರಣೆ ಹೇಗಿದೆ?**

ಶ್ರೀರಂಗದಲ್ಲಿ **ರಂಗನಾಥನ ದೇವಸ್ಥಾನದ** ಪ್ರಾಕಾರ ಪ್ರದಕ್ಷಿಣೆ ಎಲ್ಲಾ ಮಾಸದಲ್ಲಿಯೂ ಆಚರಿಸುವುದು ಸಾಮಾನ್ಯ. ಆದರೆ ಅಧಿಕಮಾಸದಲ್ಲಿ ವಿಶೇಷವಾಗಿ ಈ ಸೇವೆಯನ್ನು ಜನರು ದೇಶ ವಿದೇಶಗಳಿಂದ ಬಂದು ನಡೆಸುತ್ತಾರೆ. ದೀಪ ಬೆಳಗಿಸುವುದು ಈ ಮಾಸದ ವಿಶೇಷ.

**ಈ ಮಾಸದಲ್ಲಿ ಕಾವೇರಿಸ್ನಾನ ಮಹತ್ವದ್ದಲ್ಲವೇ?**

ಅಧಿಕಮಾಸದಲ್ಲಿ ಕಾವೇರಿಯ ಸ್ನಾನಕ್ಕಾಗಿ ಬಹುಜನರು ಬರುತ್ತಾರೆ. ಕಾವೇರಿನದಿಯು ಶ್ರೀರಂಗಕ್ಷೇತ್ರದ ಮುಂದಿನ ಪೂರ್ವಭಾಗದಲ್ಲಿ (ಪೂರ್ವದಿಕ್ಕಿನಲ್ಲಿ) ಹರಿದು ಸಮುದ್ರವನ್ನು ಸೇರುತ್ತಾಳೆ. ಹೀಗಾಗಿ ಈ ಭಾಗದ ಕಾವೇರಿಯು ಗಂಗಾನದಿಗಿಂತಲೂ ಶ್ರೇಷ್ಠಳು. ಇದು ದೇವರ ವರದಿಂದ ಲಬ್ಧವಾದ ಶ್ರೇಷ್ಠತ್ವ. **ಆಗ್ನೇಯ ಪುರಾಣದಲ್ಲಿಯೂ, ಧರ್ಮಸಂಹಿತೆಯಲ್ಲಿಯೂ** ಈ ವಿಚಾರ ವಿವರವಾಗಿ ಹೇಳಲ್ಪಟ್ಟಿದೆ.

**ಉತ್ತಮರ ಕೋವಿಲ್ ವಿಶೇಷವೇನು ?**

ಇಲ್ಲಿ ಸೌರಮಾನದ ರೀತಿ ಆಚರಣೆ ಹೆಚ್ಚು . ಹೀಗಾಗಿ ಜನ ಅಧಿಕಮಾಸವನ್ನು ಹೆಚ್ಚಾಗಿ ಆಚರಿಸುವುದಿಲ್ಲ. ಮಾಧ್ವರೊಬ್ಬರೇ ಅಧಿಕಮಾಸವನ್ನು ಆಚರಿಸುವವರು. ಶ್ರೀರಂಗದ ಹತ್ತಿರ **ಉತ್ತಮರ್ ಕೋವಿಲ್** ಎಂಬ **ದೇವಸ್ಥಾನವು ಪುರುಷೋತ್ತಮ ರೂಪಿ ಪರಮಾತ್ಮನ ದೇವಸ್ಥಾನವಾಗಿರುತ್ತದೆ.**

ಮಾಧ್ವರು ಅಧಿಕಮಾಸದಲ್ಲಿ ಹೆಚ್ಚಿನ ಪೂಜೆಯನ್ನು ಸಲ್ಲಿಸುವುದರಿಂದ ಶ್ರೀರಂಗದ ಸುತ್ತಮುತ್ತ ಇರುವ ಆಸ್ತಿಕ ಜನಕ್ಕೆ ಮಾತ್ರ ಅಧಿಕಮಾಸದ ಮಹತ್ವವು ತಿಳಿದಂತೆ ಕಾಣುತ್ತದೆ.

**ವಿಳಾಸ: ವ್ಯವಸ್ಥಾಪಕರು, ಶ್ರೀ ಶ್ರೀಪಾದರಾಜ ಮಠ, ಈರೋಡು - 638001**

ತಮಿಳುನಾಡಿನ ಹೊಸೂರಿನ ಹಯವದನ ಭಜನಾ ಮಂಡಲಿಯ ಕಾರ್ಯನಿರ್ವಾಹಕ, ಶ್ರೀನಿವಾಸ ಕಲ್ಯಾಣ ಪ್ರಚಾರಕ **ವೆಂಕಟಸುಬ್ಬುರವರನ್ನು** ದೂರವಾಣಿಯ ಮೂಲಕ ಮಾತನಾಡಿಸಿದಾಗ

# ಶ್ರೀಪಾದರಾಜರ ಕೃತಿಗಳ ವಾಚನ

## ತಮಿಳುನಾಡಿನಲ್ಲಿ ವ್ರತಾಚರಣೆ ಹೇಗೆ?

ಕೊಯಮತ್ತೂರು, ಪೊಳ್ಳಾಚಿ, ಈರೋಡು, ಶ್ರೀರಂಗ, ಧರ್ಮಪುರಿ, ಹೊಸೂರು ಪ್ರಾಂತ್ಯಗಳಲ್ಲಿ ಹೆಚ್ಚಿನ ಜನ ಅಧಿಕಮಾಸ ಆಚರಿಸುತ್ತಾರೆ. ಈ ಪ್ರಾಂತ್ಯಗಳು ಮೊದಲಿಗೆ ಮೈಸೂರು ಪ್ರಾಂತ್ಯವಾಗಿದ್ದರಿಂದ ಇಲ್ಲಿ ಜನ ಮೈಸೂರಿನ ಆಚರಣೆಯನ್ನು ಹೆಚ್ಚು ಅನುಸರಿಸುವುದು ಸ್ವಾಭಾವಿಕ.

## ಬೇರೆ ಪ್ರಾಂತ್ಯಗಳಿಗಿಂತ ವಿಭಿನ್ನವಾದ ಆಚರಣೆ ಉಂಟೇನು?

ಕೆಲವೊಂದು ವಿಶೇಷವಾದ ಆಚರಣೆಯು ಇಲ್ಲಿ ಉಂಟು. ಅವುಗಳೆಂದರೆ **ಒಂದು ಲಕ್ಷ ಅರಿಶಿನ ದಾನವನ್ನು ನೀಡುವುದು, ಪರಮಾತ್ಮನಿಗೆ ಪ್ರತಿದಿನವೂ 33 ನಮಸ್ಕಾರಗಳನ್ನು ಮಾಡುವುದು, ಪ್ರತಿದಿವಸವೂ ಒಂದೊಂದು ಮನೆಯಲ್ಲಿ 33 ರಂಗೋಲಿ ಪದ್ಮಗಳನ್ನು ಹಾಕುವುದು, 33 ಹಾಡುಗಳನ್ನು ಹೇಳುವುದು, ಒಂದು ಹಾಡು ಮುಗಿದ ತಕ್ಷಣ ಒಂದು ಪದ್ಮಕ್ಕೆ ಪೂಜೆಯನ್ನು ಮಾಡುವುದು, ಪೂಜೆ ಮುಗಿದ ತಕ್ಷಣ 33 ಫಲತಾಂಬೂಲಗಳ ಸಹಿತ ದಾನವನ್ನು ಕೊಡುವುದು - ಇವು ಇಲ್ಲಿನ ವಿಶೇಷ .**

ಅರಿಶಿನ ಸೌಭಾಗ್ಯದ ಕುರುಹು. ಈ ಪ್ರಾಂತ್ಯಗಳಲ್ಲಿ ಅರಿಶಿನವನ್ನು ಹೆಚ್ಚು ಬೆಳೆಯುತ್ತಾರೆ. ಆದ್ದರಿಂದ ಅವುಗಳ ದಾನ ಪುರಾತನ ಕಾಲದಿಂದ ರೂಢಿಯಲ್ಲಿ ಇದೆ.

ಮತ್ತೊಂದು ವಿಶೇಷವೆಂದರೆ **ಪರಮಪೂಜ್ಯಯತಿವರ್ಯ ಮತ್ತು ಹರಿದಾಸ ಪರಂಪರೆ ಅಧ್ವರ್ಯು ಶ್ರೀ ಶ್ರೀಪಾದರಾಜರ ಕೃತಿಗಳನ್ನು ಇಲ್ಲಿನ ಜನ ಅಧಿಕಮಾಸದಲ್ಲಿ** ವಿಶೇಷವಾಗಿ ಹಾಡುತ್ತಾರೆ. ಮೂಲತಃ ಅಧಿಕಮಾಸವು ಹರಿದಾಸರ ಕೃತಿಗಳನ್ನು ಶಾಂತಚಿತ್ತದಿಂದ ಪುನಶ್ಚರಣ ಮಾಡುವ ವಿಶೇಷ ದಿನಗಳಾಗಿವೆ.

**ವಿಳಾಸ: 24, ಲಕ್ಷ್ಮೀನರಸಿಂಹ ನಗರ, ತೋಟಗಿರಿ ರಸ್ತೆ, ಹೊಸೂರು-635109**





ಬಾಗಲಕೋಟೆಯ ICICI ಬ್ಯಾಂಕ್ ಹಿರಿಯ ಅಧಿಕಾರಿ **ಶ್ರೀ ಸಂಗೊಂದಿರಾಜ ಬಿ. ಮಿರ್ಜಿ** ಮತ್ತು **ಸೌ|| ಗೀತಾಬಾಯಿ ಬಿ. ಮಿರ್ಜಿ** ದಂಪತಿಗಳ ಅನಿಸಿಕೆ

# ಪುರುಷೋತ್ತಮ ನಾಮಸ್ಮರಣ ಪರ್ವ

## ಅಧಿಕಮಾಸವನ್ನು ನೀವು ಹೇಗೆ ಆಚರಿಸುತ್ತೀರಿ ?

ಪರಮಾತ್ಮನಲ್ಲಿ – **ಸಾಕ್ಷಾತ್ ಪುರುಷೋತ್ತಮನಲ್ಲಿ** – ಅನನ್ಯಭಕ್ತಿ ಮತ್ತು ಶ್ರದ್ಧೆ ಬೆಳೆಸಲು ಇದು ಪ್ರೇರಕ ಮಾಸ. ಒಂದೇ ಜಾಗದಲ್ಲಿ ಕುಳಿತು ಭಕ್ತಿಯಿಂದ ಭಗವಂತನ ಉಪಾಸನ ಮಾಡುವ ಪರ್ವಕಾಲ. ಈ ವ್ರತಾಚರಣೆಯಿಂದ  ನಮಗೆ ಮಂಗಳವಾಗಿದೆ.

**ಸಖ್ಯಭಾವದಲ್ಲಿ ಹರಿಯನ್ನು ಕಾಣುವುದು** ಪುರುಷೋತ್ತಮಾಸದ ವಿಶೇಷ. **ಈ ಮಾಸದಲ್ಲಿ ದಾನ-ಧರ್ಮ ಮಾಡಿ** ಎಂದು ಗುರು-ಹಿರಿಯರು ನಮಗೆ ಉಪದೇಶಿಸಿದ್ದಾರೆ. **ದಾನಕ್ಕೆ ಇದು ಮಲಮಾಸವಲ್ಲ, ಪರಿಶುದ್ಧಮಾಸ.** ಪುರುಷೋತ್ತಮನೇ ಮಾಸ ಅಧಿದೇವತೆ. ಹತ್ತಿ, ಬತ್ತಿ, ಅಪೂಪ, ಧಾರಣೆ, ಪಾರಣೆ, ಭಗವನ್ನಾಮ ಸಂಕೀರ್ತನೆ, 33 ದಾಸರುಗಳನ್ನು ನೆನೆಯುವ ಭಕ್ತಿಯಜ್ಞ, 33 ಕೀರ್ತನೆಗಳ ಅರ್ಥ ತಿಳಿಯುವ – ಜ್ಞಾನಸತ್ರ – ಹೀಗೆ ಭಕ್ತಿಭಾವದ ಸಂಭ್ರಮ ನಮ್ಮ ಮನೆಯಲ್ಲಿ ತುಂಬಿತುಳುಕುತ್ತದೆ.

## ವ್ರತಾಚರಣೆಯಲ್ಲಿ ನಿಮ್ಮದೇ ಆದ ವೈಶಿಷ್ಟ್ಯತೆ ಉಂಟೇನು?

ಹಾಗೇನಿಲ್ಲ, ಉಳಿದ ಭಕ್ತರಂತೆ ನಾವೂ ದಾನ-ಧರ್ಮಕ್ಕೆ ಒತ್ತುಕೊಡುತ್ತೇವೆ. ಸತ್ಪಾತ್ರರಿಗೆ ಏನೇ ಕೊಟ್ಟರೂ, ಹಾಳಾಗದಂತೆ, ಜತನಮಾಡುವ ಉದ್ದೇಶದಿಂದ ಪಾತ್ರೆಯಲ್ಲಿಟ್ಟುಕೊಡುತ್ತೇವೆ. ಇದು ತಲೆತಲಾಂತರದಿಂದ ಬಂದ ಪದ್ಧತಿ. **ದಾನ ಮಾಡುವ ಶಕ್ತಿ, ಸ್ಥೈರ್ಯ ಕೊಡು** ಎಂದು ಶ್ರೀ ಕೃಷ್ಣನನ್ನು ನಾವು ಮನೆಮಂದಿ ಪ್ರಾರ್ಥಿಸುತ್ತೇವೆ. **ದಾನಶೂರ ಕರ್ಣರು ಎನ್ನುವ ಅಹಂ ನಮಗಿರುವುದಿಲ್ಲ, ಸಾಧನೆವೆಂಬುದೆ ಸಾಕ್ಷೇಪ.. ಬೇಧಿಸಿನೋಡಲಿಕೆ ಅದುವೆ ವಸ್ತು ತಾಂ ಸಮೀಪ** ಎನ್ನುವ **ಮಹಿಪತಿದಾಸರ** ಅನುಭವಾಮೃತದ ಮಾತು ನಮಗೆ ಸ್ಫೂರ್ತಿಯಾಗುತ್ತದೆ.

**ವಿಳಾಸ : 'ಹಯವದನ', 7ನೇ ಅಡ್ಡರಸ್ತೆ, ವಿನಾಯಕನಗರ, ಬಾಗಲಕೋಟೆ-587101**

ಪ್ರಶ್ನೆ – ಉತ್ತರ
ಒಂದು ಅಧ್ಯಯನ

ಇತಿಹಾಸಕಾರ, ಸಂಶೋಧಕ, ಚಿಂತಕ, ವಿಮರ್ಶಕ,
ಚಿತ್ರದುರ್ಗ **ಕೆ. ವೆಂಕಣ್ಣಾಚಾರ್ಯ**ರವರಿಂದ ಫೋನಿನಲ್ಲಿ
ಒಂದು 'ನೆನಪಿನ ಚಿತ್ರಶಾಲೆ'

# ಎ.ಎನ್. ಮೂರ್ತಿರಾಯರು ಪುರಂದರದಾಸರನ್ನು ನೆನೆದ ಅಪೂರ್ವ ಪ್ರಸಂಗ

**ಅಧಿಕಮಾಸಕ್ಕೆ ಸಂಬಂಧಿಸಿದಂತೆ ಪೂರ್ವದಿನಗಳ ಯಾವುದಾದರೊಂದು ಸಂದರ್ಭ ಕುರಿತು ಹೇಳಿ?**

ಒಂದು ಗಂಭೀರ ಚರ್ಚೆ ನನಗೆ ನೆನಪಾಗುತ್ತಿದೆ.

ಇದು ನಡೆದದ್ದು ಚಿತ್ರದುರ್ಗದಲ್ಲಿ . 1980ರ ದಶಕದಲ್ಲಿ, ಖ್ಯಾತಸಾಹಿತಿ, **ದೇವರು** ಎನ್ನುವ ಕೃತಿರಚನೆಕಾರ, **ನಾಸ್ತಿಕ** ಹಾಗೂ ವಯೋವೃದ್ಧ ಎ.ಎನ್. **ಮೂರ್ತಿರಾಯರು** ಕಾರ್ಯಕ್ರಮವೊಂದಕ್ಕಾಗಿ ಚಿತ್ರದುರ್ಗಕ್ಕೆ ಬಂದಿದ್ದರು. ಕಾರ್ಯಕ್ರಮ ಮುಗಿದನಂತರ ಅಂದಿನ ವಯೋವೃದ್ಧ , ಶತಾಯುಷಿ, ಉದ್ದಾಮ ಪಂಡಿತ, ದೈವಭಕ್ತ **ಬಂಗ್ಲೆ ನಾರಾಯಣರಾಯರನ್ನು** ಕಂಡು ಮಾತನಾಡಿಸಿಹೋಗಲು ಮೂರ್ತಿರಾಯರು ಇಚ್ಚಿಸಿದರು. ನಾನು ಕರೆದುಕೊಂಡು ಹೋದೆ. ಜ್ಞಾನವೃದ್ಧರ ಸಮಾಗಮ – ಮಾತುಕತೆ ನಡೆದಿತ್ತು.

ಆಗ ಅಧಿಕಮಾಸ. ಬಂಗ್ಲೆ ನಾರಾಯಣರಾಯರ ಮನೆಯಲ್ಲಿ ವ್ರತ, ಧಾರಣೆ–ಪಾರಣೆ, ದಾನ, ಧರ್ಮ ನಡೆದಿತ್ತು. ಸಹಜವಾಗಿ ಮಾತು ಮಾನವಧರ್ಮಮತ್ತು ಮಾಸಧರ್ಮ ಹಾಗೂ ಹರಿದಾಸರ ಚಿಂತನೆಯತ್ತ ಹರಿದಿತ್ತು.

ಮಾತಿನ ಮಧ್ಯೆ ಮೂರ್ತಿರಾಯರು **ಪುರಂದರರ ಉದರ ವೈರಾಗ್ಯವಿದು** ಕೃತಿಯನ್ನು ಅರ್ಥಸಹಿತ ವಾಚನ ಮಾಡಿದರು. ಅಧಿಕಮಾಸವಷ್ಟೇ ಅಲ್ಲದೆ ಉಳಿದ ಮಾಸಗಳಿಗೆ ಅನ್ವಯಿಸುವಂತೆ ತುಲನಾತ್ಮಕ ವಿಮರ್ಶೆಮಾಡಿದರು. ಮೂರ್ತಿರಾಯರಿಗೆ ಹರಿದಾಸಸಾಹಿತ್ಯದ ಬಗೆಗೆ ಅಪಾರ ಅಧ್ಯಯನ ಜ್ಞಾನವಿದೆ ಎಂದು ನಮಗೆ ತಿಳಿದಿದ್ದು ಆಗಲೇ.

ಮೂರ್ತಿರಾಯರ ಭಾವನೆಗಳನ್ನು ಇಂದಿಗೂ ಅಲ್ಲಗಳೆಯುವಂತಿಲ್ಲ. **ವ್ರತ ಅಥವಾ ಧರ್ಮದ ಆಚರಣೆ ಕೇವಲ ಉದರ ವೈರಾಗ್ಯ ಆಗಬಾರದು.**

**ವಿಳಾಸ : ವಿ.ಪಿ. ಎಕ್ಸ್‌ಟೆನ್‌ಶನ್, ಚಿತ್ರದುರ್ಗ-5775019**



# ಕೃಷ್ಣನಿಗೆ ಹೋಳಿಗೆ ತಿಂಡಿ

ಪುರುಷೋತ್ತಮಮಾಸದ ವಿಶೇಷ ಖಾದ್ಯವಾದ ಅತಿರಸ (ಅಪೂಪ) ತಲೆತಲೆಮಾರಿನಿಂದ ಕನ್ನಡನಾಡಿನಲ್ಲಿ ದೇವರ ನೈವೇದ್ಯಕ್ಕೆ ಅತಿಪ್ರಿಯವೆನಿಸಿದೆ. **ಭಕ್ತಪುರಂದರದಾಸರ ಕೃತಿಗಳಲ್ಲಿ ಅತಿರಸ ಆಗಾಗ ಪ್ರಸ್ತಾಪಿತವಾಗಿ ಭಕುತರಿಗೆ ರುಚಿ ಉಣಿಸಿ ಹೋಗುತ್ತದೆ.** ಹದಿನೈದನೆಯ ಶತಮಾನದಲ್ಲಿ ಅತಿರಸ ಬಹು ಜನಪ್ರಿಯ ಖಾದ್ಯವಾಗಿತ್ತು.

ದಾಸಸಾಹಿತ್ಯ ಜಗತ್ತಿನ ಅತ್ಯಂತ ಜನಮೋಹಕ ಕೃತಿ **ಓಡಿಬಾರಯ್ಯ ವೈಕುಂಠಪತಿ ನಿನ್ನ ನೋಡುವೆ ಮನದಣಿಯಾ.** ಈ ಕೀರ್ತನೆ ಜಗದೋದ್ಧಾರನಾದ ಕೃಷ್ಣನನ್ನು ಭಕ್ತ ಕೈಬೀಸಿ ಕರೆಯುವ ಮಮತೆಯ ಝೇಂಕಾರ.

**ಎಣ್ಣೋರಿಗೆ** (ಎಣ್ಣೆಹಚ್ಚಿ ಲಟ್ಟಿಸಿದ ಹೋಳಿಗೆ) **ಅತಿರಸ**(ಅಪೂಪ) ಘೃತಕ್ಷೀರಾನ್ನ (ತುಪ್ಪ ದಿಂದ ಕಲಿಸಿದ ಹಾಲು ಸಕ್ಕರೆ ಪಾಯಸ)

ಚಿಣ್ಣರ ಒಡೆಯನೆ ಉಣ್ಣುಬಾರೋ
ಹೆಣ್ಣುಗಳೊಡನಾಟ ಸಾಕು ಬಿಡೋ ದೇವ
ಬೆಣ್ಣೆಯ ಮೆಲುವುದು ಬೇಡವೆ ಕಂದಾ
–ಪುರಂದರದಾಸರು

**ಸಂಗ್ರಹ : ಸೌ.ಗುಂಡಮ್ಮ.ರಾಯಸಮ್,**
**48-1, 5ನೇ ಮುಖ್ಯರಸ್ತೆ , ರಾಘವೇಂದ್ರಕಾಲೋನಿ, ಚಾಮರಾಜಪೇಟೆ, ಬೆಂಗಳೂರು-18**

# ಹರಿದಾಸರು ಉಣಬಡಿಸಿದ ಅಪೂಪ

ದಾಸವರ್ಯ ಪುರಂದರದಾಸರು ಬರೆದಿರುವ ಕೃತಿಗಳಲ್ಲಿ ಅತ್ಯಂತ ಜನಪ್ರಿಯವಾದ ಕೀರ್ತನೆ **ತಿರುಪತಿ ವೆಂಕಟರಮಣ ನಿನಗೇತಕೆ ಬಾರದೊ ಕರುಣಾ. ಈ ಕೀರ್ತನೆಯ ಐದನೆಯ ನುಡಿಯಲ್ಲಿ ದಾಸರು ಶ್ರೀನಿವಾಸವನ್ನು (ಶ್ರೀಕೃಷ್ಣನನ್ನು) ಅಧಿಕಮಾಸದ ಭಕ್ಷವಾದ ಅಪೂಪವನ್ನು ಮೆದ್ದವನು ಎಂದಿದ್ದಾರೆ.**

**ಅಪೂಪದ ಅತಿರಸ ಮೆದ್ದ – ಸ್ವಾಮಿ ಅಸುರರ ಕಾಲಿಲಿ ಒದ್ದ, ಸತಿಯ ಹುಡುಕಾಡುತಲಿದ್ದ, ತಾನು ಸಕಲ ದುರ್ಜನರನು ಗೆದ್ದ**

ಸ್ವಾಮಿಗೆ ಅಪೂಪ ಪರಮಹಿತವೆನಿಸುವ ಖಾದ್ಯವಾಗುತ್ತದೆ. ಅಸುರರನ್ನು ಶ್ರೀನಿವಾಸ ಕಾಲಲ್ಲಿ ಒದ್ದು ವಿಶ್ವಕ್ಕೆ ಬಂದಿದ್ದ ಕಂಟಕವನ್ನು ಬಗೆಹರಿಸುತ್ತಾನೆ. ಪದ್ಮಾವತಿ (ಶ್ರೀಲಕ್ಷ್ಮಿ)ಯನ್ನು ಹುಡುಕಿಕೊಂಡು ತಿಮ್ಮಪ್ಪನು ಗಿರಿಯಲ್ಲಿ ಅಲೆದಾಡುತ್ತಾನೆ. ಈ ಅರ್ಥಗಳ ಮೂಲಕ ಪುರುಷೋತ್ತಮನ ಕಥೆ ಸಾಗುತ್ತದೆ.

**ಸಂಗ್ರಹ : ವಸುದೇಂದ್ರ ಜಾಗೀರದಾರ**
**ಶ್ರೀ ಶ್ರೀಪಾದರಾಜಮಠ, ರಾಘವೇಂದ್ರಕಾಲೋನಿ, ಚಾಮರಾಜಪೇಟೆ, ಬೆಂಗಳೂರು-18**

ರಂಗವಿಠಲ ಪತ್ರಿಕೆಯು ಈ ಬಾರಿಯ ಅಧಿಕಮಾಸ ಸಂದರ್ಭದಲ್ಲಿ ಹರಿದಾಸರುಗಳ 233 ಕೃತಿಗಳ ಸಾರಗ್ರಂಥವೊಂದನ್ನು ಪ್ರಕಟಿಸಿದೆ. ಲೇಖಕಿ ಕೊಪ್ಪರದ ಸೌ|| ಗೀತಾಬಾಯಿ ನರಸಿಂಹರಾವ್ ಕುಲಕರ್ಣಿ ಇವರನ್ನು ಸಂದರ್ಶಿಸಿದಾಗ

## ''ಕೈವಲ್ಯ ಸೋಪಾನ'' – ಅಧಿಕಮಾಸಕ್ಕಾಗಿ ಕೀರ್ತನೆಗಳು

**ಈ ಗ್ರಂಥಪ್ರಕಟನೆಗೆ ನಿಮಗೆ ಸ್ಫೂರ್ತಿ ಯಾರು?**

**ಬಾಲ್ಯದಲ್ಲಿ ನಮಗೆ ಹರಿದಾಸ ಸಾಹಿತ್ಯದ ಅಮೂಲ್ಯ ತವನಿಧಿಯನ್ನು ಪರಿಚಯಿಸಿ, ಆಧ್ಯಾತ್ಮಿಕ ಚಿಂತನೆಗಳಿಗೆ ಮಾರ್ಗದರ್ಶನವಿತ್ತವರು ರಾಯಚೂರು ಜಿಲ್ಲೆಯ ಕೃಷ್ಣಾನದಿ ತೀರದ ಕೊಪ್ಪರ ನೃಸಿಂಹ ಕ್ಷೇತ್ರದ ಹಿರಿಯರು.** ವಿಶೇಷವಾಗಿ ಹರಿದಾಸರ ಚಿಂತನೆಗಳಲ್ಲಿ ಬರುವ **ಹರಿಸರ್ವೋತ್ತಮತ್ವ ಮತ್ತು ಪರಂಪರಾನುಗತ ಧಾರ್ಮಿಕ ನಡವಳಿಕೆಗಳ** ಬಗೆಗೆ ಉಪದೇಶ ಮಾಡಿದವರು **ಪೂಜ್ಯರಾದ ಕೊಪ್ಪರ ಗಿರಿಯಾಚಾರ್ಯರು, ನಾರಾಯಣಾಚಾರ್ಯರು, ಮಣೂರು ಮಧ್ವಾಚಾರ್ಯರು ಮತ್ತಿತರರು.**

ಅಧಿಕಮಾಸಕ್ಕೆ ಅನ್ವಯಿಸಿದಂತೆ ಅವರುಗಳು ಹೇಳಿದ ಮಾತೆಂದರೆ:**ಈ ಮಾಸದಲ್ಲಿ, ಅಷ್ಟೇ ಏಕೆ ಎಲ್ಲ ಮಾಸಗಳಲ್ಲಿಯೂ ಕೃಷ್ಣಾನದಿಯಲ್ಲಿ ಸ್ನಾನ ಮಾಡುವುದು ಕಾಶಿಗೆ ಹೋಗಿ ಗಂಗೆಯಲ್ಲಿ ಮಿಂದಷ್ಟು ಪುಣ್ಯ.**

**ಅತಿಸಾಮಾನ್ಯ ಹರಿಭಕ್ತೆಯಾಗಿ ಅಧಿಕಮಾಸದಲ್ಲಿ ಭಕ್ತಜನರಲ್ಲಿ ನನ್ನ ಸಲಹೆ ಮತ್ತು ಪ್ರಾರ್ಥನೆಯೆಂದರೆ ನಮ್ಮ ಪವಿತ್ರ ನದಿಗಳಲ್ಲಿ ಪುಣ್ಯಸ್ನಾನ ಮಾಡಿ. ಇದು ಜೀವನ ಸಾಫಲ್ಯಕ್ಕೆ ಸುಲಭಸಾಧನ.**

**ಅಧಿಕಮಾಸದ ಆಚರಣೆಗಳು ಹೇಗಿರಬೇಕು?**

ಹೇಗೆ ಮಾಡಿದರೂ ಚಿಂತಿಲ್ಲ, ಆದರೆ ''ನಾನು ದಾನ ಮಾಡುತ್ತಿದ್ದೇನೆ'' ಎನ್ನುವ **ಅಹಂಭಾವ ಸಲ್ಲದು. ಅಧಿಕಮಾಸದ ಸಂದೇಶವೇ ಇದು. ಪ್ರಪಂಚಕ್ಕೆ ಗೊತ್ತಾಗದ ರೀತಿಯಲ್ಲಿ ದಾನ-ಧರ್ಮ ಮಾಡುವುದು ನಮ್ಮ ದಿನನಿತ್ಯದ ನಡೆ – ನುಡಿ ಆಗಬೇಕು.**

**ವಿಳಾಸ : ಶ್ರೀರಾಮಭಜನಾಮಂಡಲಿ, 53, ರಾಘವೇಂದ್ರಕಾಲೋನಿ, 1ನೇ ಮುಖ್ಯರಸ್ತೆ ಚಾಮರಾಜಪೇಟೆ, ಬೆಂಗಳೂರು - 560018.**





ಸಮಕಾಲೀನ ಚಿಂತಕ, ನಾಡಿನ ಹಿರಿಯ ಪತ್ರಕರ್ತ ಶ್ರೀ ಕೃಷ್ಣವಟ್ಟಂರವರೊಂದಿಗೆ ಮೈಸೂರಿನಿಂದ ನಡೆಸಿದ ಸಂಭಾಷಣೆಯ ಮುಖ್ಯ ಅಂಶಗಳು

## ಬಂಗಾರದ ಖರೀದಿಗೆ ಜಾಹಿರಾತು: ಅಕ್ಷಯ ತೃತೀಯ

**ಅಧಿಕಮಾಸದ ಹೆಸರಿನ ದುರ್ಬಳಕೆ ಹೆಚ್ಚುತ್ತಿದೆ ಎಂದೆನಿಸುವುದಿಲ್ಲವೇ ?**

ಇದು ಚಿಂತಿಸಬೇಕಾದ ಬೆಳವಣಿಗೆ. ಭಕ್ತರನ್ನು ಅಧಿಕಮಾಸದ ಹೆಸರಿನಲ್ಲಿ **ಸುಲಿಗೆ** ಮಾಡುವ ಪ್ರವೃತ್ತಿ ಸರಿಯಲ್ಲ, ವೈದಿಕ ಸಮುದಾಯ ಈ ಬಗೆಗೆ ಎಚ್ಚರ ವಹಿಸಬೇಕು. **ಮುಂದಿನ ಪೀಳಿಗೆಯ ನಮ್ಮ ಮಕ್ಕಳಿಗೆ ಧಾರ್ಮಿಕ ವ್ರತಾಚರಣೆಗಳ ಬಗೆಗೆ ಅಪನಂಬಿಕೆ ಬರಬಾರದು.** ಶ್ರದ್ಧೆಹುಟ್ಟಬೇಕು.

**ಈ ಬೆಳವಣಿಗೆಗೆ ಕಾರಣವೇನು?**

ನೂರಾರು ಕಾರಣಗಳಿವೆ.

**ವ್ರತವನ್ನು (ಅತಿಯಾಗಿ) ಮಾಡಿ ದಣಿಯಲುಬೇಡ ಜ್ಞಾನವೊಂದೇ ಸಾಕು, ಹುಚ್ಚು ಮರುಳೇ** – ಹೀಗೆಂದು ಎಚ್ಚರಿಸಿದ್ದಾರೆ **ಪುರಂದರದಾಸರು.** ಅತಿಯಾದ ಆಡಂಬರ ಮತ್ತು ದಾನಧರ್ಮದ ಹೆಸರಿನಲ್ಲಿ ಪ್ರಚಾರ –ಈ ಬೆಳವಣಿಗೆಗೆ ಮುಖ್ಯಕಾರಣಗಳು.

**ವ್ರತಾಚರಣೆ ಹೆಸರಿನಲ್ಲಿ ಭಕ್ತರನ್ನು ದಾರಿತಪ್ಪಿಸುವ ಉದಾಹರಣೆ ಹೇಳಿ?**

**ಭಕ್ತರಿಗೆ ಮಂಕು ಬೂದಿ ಎರೆಚುತ್ತಿರುವ ಪ್ರತ್ಯಕ್ಷ ನಿದರ್ಶನ ಒಂದಿದೆ.** ಇದು ನಡೆದಿರುವುದು ಕಳೆದ ಐದು ಹತ್ತು ವರ್ಷಗಳಿಂದೀಚೆಗೆ ಎಂದು ಹೇಳಿದಲ್ಲಿ ತಪ್ಪಾಗಲಾರದು.

ಹಲವು ವರುಷಗಳಿಂದ **ಅಕ್ಷಯ ತೃತೀಯ** ಆಚರಿಸುತ್ತಿರುವುದು ನಿಮಗೆ ನೆನಪಿದೆಯಷ್ಟೆ, ಕಳೆದ ಐದು – ಹತ್ತು ವರ್ಷಗಳಲ್ಲಿ ಅಕ್ಷಯ ತೃತೀಯದ ಮೂಲಉದ್ದೇಶವನ್ನು ತಿರುಚುವ ಸಾಹಸ ನಡೆದಿದೆ. **ಅಕ್ಷಯ ತೃತೀಯ ದಿನದಂದು ಬಂಗಾರ ಕೊಳ್ಳದಿದ್ದರೆ ಮಹಾಪಾಪ ಮಾಡಿದಂತೆ** ಎನ್ನುವ ಭಯ ಮೂಡಿಸುವಷ್ಟು ತೀವ್ರವಾಗಿ ಈ ಪ್ರಚಾರದ ವೈಖರಿ ವ್ಯಾಪಿಸಿದೆ.

**ಅಕ್ಷಯ ತೃತೀಯದ ಮಹತ್ವ ಬಂಗಾರದ ಖರೀದಿ ನೆಪದಲ್ಲಿ ದಿವಾಳಿಯಾಗಿಬಿಟ್ಟಿದೆ.**

**ವಿಳಾಸ: ನಂ. 4, ನಾಲ್ಕನೆ ಮುಖ್ಯರಸ್ತೆ, ವಿದ್ಯಾರಣ್ಯಪುರ, ಮೈಸೂರು-570008**

ಪ್ರಶ್ನೆ – ಉತ್ತರ
ಒಂದು ಅಧ್ಯಯನ

ಸುಬೋಧ ವಿರಚಿತ 'ಹರಿದಾಸ ಕೀರ್ತನ ತರಂಗಿಣಿಯನ್ನು' ಕುರಿತು ಅಧಿಕಾರಯುತವಾಗಿ ಮಾತನಾಡಬಲ್ಲ ಬೆಂಗಳೂರಿನ **ಶ್ರೀಮತಿ ಪಂಕಜಾ ಸುಬೋಧ** ಇವರನ್ನು ಮಾತಾಡಿಸಿದಾಗ

## ಐದು ಸಲ ಭಾಗವತವನ್ನು ಮುದ್ರಿಸಿದವರು

### ಸುಬೋಧ ರಾಮರಾಯರಂತಹ ಪ್ರಾತಃಸ್ಮರಣೀಯ ವ್ಯಕ್ತಿಯ ವಂಶಸ್ಥರು ನೀವು. ನಿಮ್ಮ ಚಿಂತನೆ ಏನು?

**ದಾಸಸಾಹಿತ್ಯವನ್ನು ಜನಪ್ರಿಯಗೊಳಿಸಲು ಜೀವನಪರ್ಯಂತ ನಿಷ್ಠೆಯಿಂದ ದುಡಿದವರು ದಿವಂಗತ ಸುಬೋಧ ರಾಮರಾಯರು.**

ಪುರುಷೋತ್ತಮಮಾಸದಲ್ಲಿ ಏನೆಲ್ಲ ಧರ್ಮಕಾರ್ಯಗಳನ್ನು ಮಾಡಬೇಕೆಂದು ಭಕ್ತ ಜನರಿಗೆ ತಿಳುವಳಿಕೆ ನೀಡುವುದೇ ಇವರಿಗೆ ವ್ರತವಾಗಿತ್ತು.

ನನ್ನ ಪತಿ **ದಿವಂಗತ ಗುರುರಾಜ ಸುಬೋಧರವರು ಸುಭೋದರಾಮರಾಯರು ಬರೆದ 861 ಪುಟಗಳ ಭಾಗವತ ಕಥಾಸಾರವನ್ನು** ಐದು ಬಾರಿ ಪುನರ್ ಮುದ್ರಣ ಮಾಡಿ ಹಂಚಿದ್ದರು. ಈ ಪೈಕಿ ಮೂರು ಮುದ್ರಣಗಳು ಅಧಿಕಮಾಸದಲ್ಲಿ ನಡೆದಿವೆ.

ನನ್ನ ತಾತ **ಅನಂತ ಕೃಷ್ಣಮೂರ್ತಿಗಳು** ಪುರುಷೋತ್ತಮಮಾಸದಲ್ಲಿ ನೂರಾರು ಮನೆಗಳಿಗೆ ಭೇಟಿ ನೀಡಿ ಜ್ಞಾನದೀಪವನ್ನು ಬೆಳಗಿಸಲು ಅಧಿಕಮಾಸವನ್ನು ಮೀಸಲಾಗಿಟ್ಟಿದ್ದರು. ದಾಸಸಾಹಿತ್ಯ ಪ್ರಚಾರಕ್ಕಾಗಿ ಅವರು ಬಳಸುತ್ತಿದ್ದ ತಂಬೂರಿ ಇಂದಿಗೂ ನಮ್ಮಲ್ಲಿದೆ.

**ನಮ್ಮ ಹಿರಿಯರಿಂದ ನಾವು ಕಲಿತ ಪಾಠವೆಂದರೆ ಪುರುಷೋತ್ತಮಮಾಸದಲ್ಲಿ ಭಕ್ತಿಸಾಹಿತ್ಯ ಸೇವೆಗಿಂತ ಮಿಗಿಲಾದದ್ದು ಮತ್ತೊಂದಿಲ್ಲ. ಸುಬೋಧರಾಮರಾಯರು ಅಧಿಕಮಾಸದಲ್ಲಿ ರಾಮಕೋಟಿ ನಾಮಗಳನ್ನು ಬರೆದು ಭಗವಂತನಿಗೆ ಅರ್ಪಿಸುತ್ತಿದ್ದರು.**

ಈ ಎಲ್ಲ ಅನುಭವಗಳ ಹಿನ್ನೆಲೆಯಲ್ಲಿ **ಶ್ರೀಜಗನ್ನಾಥದಾಸರು** ಹರಿಕಥಾಮೃತ ಸಾರದಲ್ಲಿ ಹೇಳಿದ ಮಾತು ನಿಜ. **'ಮರಳಿ ತನಗರ್ಪಿಸಲು ಹರಿ ಕೊಟ್ಟುದನಂತ ಮಡಿ ಮಾಡಿ'.**

**ವಿಳಾಸ: ಹರಿತಸ 125/ಜಿ, ನೆಹರೂರಸ್ತೆ, ಗಿರಿನಗರ, ಬೆಂಗಳೂರು - 560085.**





ಪ್ರಶ್ನೆ – ಉತ್ತರ
ಒಂದು ಅಧ್ಯಯನ

ಖ್ಯಾತಮಾಹುಲಿ ವಂಶಸ್ಥರೂ, ಹರಿದಾಸಸಾಹಿತ್ಯ ಪ್ರಚಾರಕರೂ ಆದ ವಿಜಾಪುರದ **ಸೌ|| ನಿರ್ಮಲಾಬಾಯಿ** ಮತ್ತು **ಶ್ರೀ ಬಾಬೂರಾವ್ ಮಾಹುಲಿ ಆಚಾರ್ಯ**ರೊಂದಿಗೆ

## ತ್ಯಾಗ - ಸಮರ್ಪಣೆಯ ಸಾಧನ

### ಪುರುಷೋತ್ತಮಮಾಸದಿಂದ ನೀವು ಕಲಿತ ಸಂದೇಶವೇನು?

ನಮ್ಮ ಹಿರಿಯರಿಂದ ನೋಡಿ, ಕಲಿತು, ಆಚರಣೆಗೆ ತಂದ **ಮಾಸನಿಯಾಮಕನ ವಿಶೇಷ ಉತ್ಸವ ಅಧಿಕಮಾಸ.**

**ಭಕ್ತಿ, ಸಮರ್ಪಣೆ, ತ್ಯಾಗ ಮತ್ತು ದಾನಕ್ಕೆ ಮೀಸಲು ಈ ಮಾಸ.** ಧಾರವಾಡ, ಬೆಳಗಾವಿ, ಐನಾಪುರ, ಬಾಗಲಕೋಟೆ, ವಿಜಾಪುರ ಇವೇ ಮೊದಲಾದ ಭೂಪ್ರದೇಶಗಳಲ್ಲಿ ನಮ್ಮೆಲ್ಲರ ಮೇಲೆ ವಿಶೇಷವಾಗಿ ಪ್ರಭಾವಬೀರಿದ ಜ್ಞಾನಿಗಳು **ಮಾನವಿಯ ಶ್ರೀ ಜಗನ್ನಾಥದಾಸರು. ಶ್ರೀಹರಿಕಥಾಮೃತಸಾರವನ್ನು** ವಿಶೇಷವಾಗಿ ಮನನ ಮಾಡಿಕೊಳ್ಳುವುದು ಈ ಮಾಸದ ಮೊತ್ತಮೊದಲ ಕಾರ್ಯ.

ನಮ್ಮ ಗುರುಗಳಾಗಿ, ಇಂದಿಗೂ ನಮ್ಮೊಂದಿಗೆ ಇರುವ ಜ್ಞಾನಿ **ಮೊಕಾಶಿ ಮಧ್ವಾಚಾರ್ಯರು** ನಮಗೆ ಆದೇಶಿಸಿರುವುದೇನೆಂದರೆ, **ಅಧಿಕಮಾಸದಲ್ಲಿ ಆಡಂಬರ ಬೇಡ; ಸರ್ವಸಮರ್ಪಣ ಭಾವದಿಂದ ದಾನ-ಧರ್ಮ ಮಾಡಿ. ಪುರುಷೋತ್ತಮನಿಗೆ ಇದು ಅರ್ಪಿತವಾಗಲಿ.**

### ಹರಿಸಮರ್ಪಣೆಗೆ ನಿಮ್ಮ ವಿಧಾನವೇನು?

ಧಾರವಾಡದಲ್ಲಿ ಚಿಕ್ಕವರಿದ್ದಾಗ ನಮ್ಮ **ಅಜ್ಜ ವೆಂಕಟರಾವ ಕೊಣ್ಣೂರರವರು** ನಮಗೆ ಹೇಳಿಕೊಟ್ಟ ಸುಲಭ ಮಾರ್ಗವನ್ನು ಇಂದಿಗೂ ನಾವು ಮರೆತಿಲ್ಲ. ದಾಸಶ್ರೇಷ್ಠರುಗಳಾದ **ಶ್ರೀಪಾದರಾಜರು, ವ್ಯಾಸರಾಯರು, ಪುರಂದರ-ಕನಕದ್ವಯರು, ಹರಪನಹಳ್ಳಿ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮ, ಅಂಬಾಬಾಯಿ, ಅನಂತಾದ್ರೀಶರು, ಪ್ರಸನ್ನವೇಂಕಟರು** ಇವರೇ ಮೊದಲಾದ ಹರಿದಾಸರ 33 ಕೃತಿಗಳ ಪಠನ, ವಾಚನ, ಮನನ, ಪುನಶ್ಚರಣ, - ಇವು ನಮ್ಮ ಅಧಿಕಮಾಸದ ದಿನಚರಿ. **ಆರತಿ, ಬತ್ತಿ, ಗೆಜ್ಜೆವಸ್ತ್ರ , ಲಕ್ಷ್ಮೀನಾರಾಯಣ ಬೊಟ್ಟು ರಂಗೋಲಿ, ತಾಂಬೂಲ, ಉಡಿತುಂಬುವ ಕ್ರಿಯೆ** - ಇವೆಲ್ಲವೂ ಶ್ರೀಕೃಷ್ಣಪಾರಮ್ಯಕ್ಕೆ ನಮ್ಮನ್ನು ಕೊಂಡೊಯ್ಯುವ ಪರಿಕರಗಳು ಎಂದು ನಾವು ನಂಬಿದ್ದೇವೆ.

**ವಿಳಾಸ: ನವರಸಪುರ ಕಾಲೋನಿ, ಬಾಗಲಕೋಟೆ ರಸ್ತೆ, ವಿಜಾಪುರ-586101**

ಕಳೆದ ಐವತ್ತು ವರುಷಗಳಿಗೂ ಮೀರಿ ಶ್ರದ್ಧೆಯಿಂದ ದಾನ–ಧರ್ಮ–ವ್ರತ ಮಾಡುತ್ತಿರುವ ಮೈಸೂರಿನ **ಸೌ|| ವಿಮಲಾಬಾಯಿ** ಮತ್ತು **ಶ್ರೀ ಬಿ.ಎಸ್.ವೆಂಕಟೇಶರಾವ್** ಇವರನ್ನು ಸಂದರ್ಶಿಸಿದಾಗ

# ಪ್ರಸನ್ನವೇಂಕಟರ ಉಪದೇಶಾಮೃತ

**ಬಹುನಿಷ್ಠೆಯಿಂದ ವ್ರತ ಆಚರಿಸುವವರು ನೀವು, ನಿಮ್ಮ ಅನಿಸಿಕೆಗಳೇನು ?**

ಇಷ್ಟದೈವದ ಅನುಗ್ರಹಬೇಕೆನಿಸಿದಲ್ಲಿ **ಅಧಿಕಮಾಸದಲ್ಲಿ ದಾನ–ಧರ್ಮ ಮಾಡಿ ಎಂಬುದು ನಮ್ಮ ಹಿರಿಯರು ನಮಗೆ ನೀಡಿದ ಉಪದೇಶ.** ಹರಿಭಕ್ತಿಯಲ್ಲಿ ಅಪ್ರತಿಮನಿಷ್ಠೆಯು ಅಧಿಕಮಾಸದ ಆಚರಣೆಗೆ ನಮಗೆ ಮೂಲ ಪ್ರೇರಣೆ.

**ಹರಿದಾಸರ ಕೃತಿಗಳಿಂದ ನೀವು ಅರ್ಥಮಾಡಿಕೊಂಡಿದ್ದೇನು ?**

ಎಲ್ಲ ಹರಿದಾಸರೂ ಶ್ರೀ ಹರಿಯ ಕಿಂಕರರೇ. **ಶ್ರೀ ಪ್ರಸನ್ನ ವೆಂಕಟದಾಸರು** ಹೇಳಿರುವಂತೆ ಹರಿನಾಮ ಮಹಿಮೆ ಮತ್ತು ಅಚಲ ಶ್ರದ್ಧೆಯಿಂದ **ಪರಿಪರಿ ಭವರೋಗಕೆ ಔಷಧಸಿಗುತ್ತದೆ.** ಭಗವಂತನನ್ನು ಶಾಂತಭಾವದಲ್ಲಿ ಕಾಣುವಂತೆ ದಾಸವರೇಣ್ಯರು ನಮಗೆ ಆದೇಶಿಸಿದ್ದಾರೆ. **ಭವ ಭಯದಿ ತೊಳತೊಳಲಿ ಬಳಬಳಲಿ ಬಲುದಣಿದ ಹರಿಭಕುತಮಂದಿ** ವ್ರತ, ನೇಮಗಳನ್ನು ಮಾಡಿ ಭಗವಂತನ ಕರುಣೆ ಪಡೆಯುವಂತೆ ಹರಿದಾಸರು ಮಾರ್ಗದರ್ಶನ ತೋರಿದ್ದಾರೆ.

**ಹರಿಕೊಟ್ಟಾಗಲೇ ಧರ್ಮಬುದ್ಧಿಯನು ಜತನ ಮಾಡು** ಎನ್ನುವ **ಪ್ರಸನ್ನ ವೆಂಕಟದಾಸರ** ಹಿತನುಡಿ ಅಧಿಕಮಾಸ ವ್ರತಾಚರಣೆಗೆ ನಮಗೆ ಪ್ರೇರಕ ಶಕ್ತಿ.

**ಅಧಿಕಮಾಸ ಆಚರಣೆ ಹೇಗಿರಬೇಕು?**

ದಾನ–ಧರ್ಮಕಾರ್ಯ ಈ ಮಾಸದ ವೈಶಿಷ್ಟ್ಯತೆ. ಕರೆದ ಪದಾರ್ಥಗಳನ್ನು ಸತ್ಪಾತ್ರರಿಗೆ ಪಾತ್ರೆಯಲ್ಲಿಟ್ಟು ದಾನ ಮಾಡು ಎಂದು ಹೇಳುವವರೂ ಇದ್ದಾರೆ. ಇದರೊಂದಿಗೆ ಒಂದೇ ಜಾಗದಲ್ಲಿ ಕುಳಿತು ಜಪ, ತಪ, ಧಾರಣೆ, ಪಾರಣೆ ಮಾಡು ಎಂದಿದ್ದಾರೆ. ಕನಿಷ್ಠ 33 ದಂಪತಿಗಳಿಗೆ ಭಕ್ತಿಯಿಂದ ಪರಮಾತ್ಮಕೊಟ್ಟ ಭಾಗ್ಯಸಂಪತ್ತನ್ನು ಉಣಬಡಿಸು – ಹೀಗೆಂದು ಭಕ್ತರು ವ್ರತತೊಡುತ್ತಾರೆ.

**ವಿಳಾಸ: ನಂ. 1854 1ನೇ ಅಡ್ಡರಸ್ತೆ, ಕೆ ಬ್ಲಾಕ್, ಕುವೆಂಪುನಗರ, ಮೈಸೂರು-570023**





ಖ್ಯಾತ ಸಂಸ್ಕೃತ ಭಾಷಾ ತಜ್ಞ, ಶಿಕ್ಷಣವೇತ್ತ **ಪಂ|| ಹಿರಿಯಡ್ಕ ಬಿ. ಗೋಪಾಲಾಚಾರ್ಯ** ಇವರೊಂದಿಗೆ ಮಾತುಕತೆ

# ''ಹೀಗೇ ಮಾಡಿ, ಇಷ್ಟೇ ಮಾಡಿ'' ಎನ್ನುವುದು ಸರಿಯಲ್ಲ

**ಅಧಿಕಮಾಸ ಕುರಿತಂತೆ ಹರಿದಾಸರು ಹೆಚ್ಚು ದೇವರನಾಮ ರಚಿಸಿದಂತಿಲ್ಲ. ಏಕೆ?**

ಶ್ರೀ ವಿಜಯದಾಸರು ಈ ಪ್ರಶ್ನೆಗೆ ಒಂದೇ ಮಾತಿನಲ್ಲಿ ಉತ್ತರಿಸಿದ್ದಾರೆ. **ವಾಗತ್ಯಪಡುವುದೆ ವಿಧಿನಿಷೇಧಾಚರಣೆ; ಮಧ್ವಾಂತರ್ಗತ ವಿಜಯವಿಠ್ಠಲರೇಯ, ಸಾಧನಕೆ ಬಗೆಗಾಣೆ ಎನಬಹುದೇ?**

ದಾನಧರ್ಮಗಳು ಭಗವಂತನಿಗೆ ನಾವು ಸಲ್ಲಿಸುವ ಪೂಜೆ ಇದ್ದಂತೆ. ದಾನ ಧರ್ಮದಿಂದಾಗಿ ಪಾರಮಾರ್ಥಕ್ಕೆ ಹೋಗಲು ಸಾಧ್ಯ ಎಂದಿದ್ದಾರೆ ಹರಿದಾಸರು. ಹೀಗಾಗಿ ಪ್ರತ್ಯೇಕವಾಗಿ ಕೃತಿರಚಿಸುವ ಅವಶ್ಯಕತೆ ಇಲ್ಲ ಎನಿಸುತ್ತದೆ.

**ಉಡುಪಿಯ ಶ್ರೀಕೃಷ್ಣಮಠದ ಪರಿಸರ ಈ ಮಾಸದಲ್ಲಿ ಹೇಗಿರುತ್ತದೆ ?**

**ವರ್ಷವಿಡೀ ಪರಮಪುರುಷ ಪುರುಷೋತ್ತಮ ಶ್ರೀಕೃಷ್ಣನ ದರುಶನಕ್ಕಾಗಿ ಉಡುಪಿಕ್ಷೇತ್ರದಲ್ಲಿ ಭಕ್ತರ ಸಂದಣಿ ಏಕಪ್ರಕಾರವಾಗಿರುತ್ತದೆ.** ಮಾಸನಿಯಾಮಕ ಶ್ರೀಕೃಷ್ಣ (ಪುರುಷೋತ್ತಮ) ಭಕ್ತರಿಗೆ ವ್ರತ, ನೇಮ, ನಿಷ್ಠೆ ದಾನ, ಧರ್ಮಾದಿಗಳನ್ನು ಮಾಡಲು ವಿಶೇಷ ಅನುಸಂಧಾನ ಸೃಷ್ಟಿಸಿರುವುದನ್ನು ಇಲ್ಲಿನ ಪೂಜಾದಿಗಳಲ್ಲಿ ಕಾಣಬಹುದು.

**ಅಧಿಕಮಾಸದ ಹೆಸರಿನಲ್ಲಿ ವೈದಿಕಲೋಕದಲ್ಲಿ ಶೋಷಣೆ ನಡೆಯ ಬಹುದೇ?**

ಶ್ರೀಕೃಷ್ಣಪರಮಾತ್ಮನ ದಯೆಯಿಂದ ಪುಣ್ಯಕ್ಷೇತ್ರಗಳಲ್ಲಿ ಇಂತಹ ಶೋಷಣೆಗೆ ಅವಕಾಶವಿಲ್ಲ. ಆದರೆ ವ್ರತದ ಹೆಸರಿನಲ್ಲಿ ಗಳಿಸಬೇಕು **ಎನ್ನುವ ತುಡಿತದಿಂದ** ಭಕ್ತರನ್ನು ಉತ್ಪ್ರೇಕ್ಷೆಯ ಮಾತುಗಳಿಂದ ಓಲೈಸಿ, ಶೋಷಿಸುವ ಸಂದರ್ಭಗಳು ಅಲ್ಲಲ್ಲಿ ಕಾಣುತ್ತಿವೆ. **''ಹೀಗೇ ದಾನಮಾಡಿ, ಇಷ್ಟು ಸಂಖ್ಯೆಯಲ್ಲಿಯೇ ಮಾಡಿ, ಇದನ್ನೇ ಮಾಡಿ''** – ಈ ಪರಿಯ ಸುಲಿಗೆ ಸರ್ವಥಾ ಸರಿಯಲ್ಲ.

**ವಿಳಾಸ: ಪ್ರಧಾನ ಆಚಾರ್ಯ, ಪುತ್ತಿಗೆ ಸಂಸ್ಕೃತ ವಿದ್ಯಾಪೀಠ, ನಿರ್ದೇಶಕ, ದಾಸ ಸಾಹಿತ್ಯ ಪ್ರಚಾರ ಪ್ರತಿಷ್ಠಾನ, ಬೆಂಗಳೂರು ಮತ್ತು ಹಿರಿಯಡಕ, ಪುತ್ತಿಗೆ, ದಕ್ಷಿಣಕನ್ನಡ**